ಪ್ರಚಾರ ಪುಸ್ತಕಮಾಲೆ–೨೯

ಸರ್ವಜ್ಞ ಕವಿ

ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.,

೧೯೮೭

ಮೊದಲನೆಯ ಮುದ್ರಣ: ೧೯೪೮
ಎರಡನೆಯ ಮುದ್ರಣ: ೧೯೫೭
ಮೂರನೆಯ ಮುದ್ರಣ: ೧೯೬೫
ನಾಲ್ಕನೆಯ ಮುದ್ರಣ: ೧೯೮೦
ಐದನೆಯ ಮುದ್ರಣ: ೧೯೮೭

೧೧,೦೦೦ ಪ್ರತಿಗಳು

ಬೆಲೆ: ೩೫ ಪೈಸೆ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೬

ಸರ್ವಜ್ಞ ಕವಿ

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಮೂರು ವರ್ಷಗಳ ಹಿಂದೆ ಪ್ರಾರಂಭವಾಯಿತು. ಅತಿ ಸುಲಭವಾದ ಬೆಲೆಯಿಟ್ಟು ಇಂಥ ಪುಟ್ಟ ಪುಸ್ತಕಗಳನ್ನು ಹೊರಡಿಸಿದರೆ, ಅವನ್ನು ಓದಿ ಮೆಚ್ಚುವವರು ಮೈಸೂರಿನ ಜನರಲ್ಲಿ ಬಹುವಾಗಿ ದೊರೆಯುವರೆಂಬ ಭರವಸೆಯೇ ಈ ಪ್ರಯತ್ನಕ್ಕೆ ಪ್ರೇರಕ. ಮೊಟ್ಟಮೊದಲು ಮೈಸೂರು ವಿಶ್ವವಿದ್ಯಾನಿಲಯವು ಕೈಕೊಂಡ ಈ ಹೊಸ ಮಾರ್ಗದ ಉದ್ಯಮವು ಅದನ್ನು ಏರ್ಪಡಿಸಿದವರ ಅತ್ಯಂತ ನಿರೀಕ್ಷೆಯನ್ನೂ ಮೀರಿ ಫಲಕಾರಿಯಾಗಿದೆಯೆಂದು ದಿಟವಾಗಿ ಹೇಳಬಹುದು. ಈ ಮೂರು ವರ್ಷಗಳಲ್ಲಿ ೩೪ ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ೧೨ ಸಾಹಿತ್ಯಕ್ಕೆ ಸಂಬಂಧಪಟ್ಟವು; ೧೧ ಭೌತ ಮತ್ತು ಜೀವ ವಿಜ್ಞಾನಗಳನ್ನು ಕುರಿತವು. ಉಳಿದವನ್ನು ಸಾಮಾಜಿಕ ಶಾಸ್ತ್ರಗಳ ಗುಂಪಿಗೆ ಸೇರಿಸಬಹುದು; ಇವುಗಳ ವಿಷಯಕ್ಷೇತ್ರವು ವಿಶಾಲವಾದದ್ದು. ಕನ್ನಡದ ವಿಚಾರದಲ್ಲಿ ಯಾರ ಮನ್ನಣೆಯಿದೆಯೋ ಅಂಥ ಮಹನೀಯರು ಮಾತ್ರ ಈ ಪುಸ್ತಕಗಳನ್ನು ಅತ್ಯುತ್ಸಾಹದಿಂದ ಬರೆದುಕೊಂಡಿದ್ದಾರೆ. ಈ ಮಾಲೆಯಲ್ಲಿ ಹೊಸದೊಂದು ಪುಸ್ತಕ ಹೊರಬಿದ್ದ ದಿನವೇ ಸುಮಾರು ೬೦೦ ಪ್ರತಿಗಳು ಮಾರಾಟವಾಗುತ್ತವೆ; ಈ ಮೂರು ವರ್ಷಗಳ ಅವಧಿಯಲ್ಲಿ ಸುಮಾರು ೬೦,೦೦೦ ಪ್ರತಿಗಳು ವಿಕ್ರಯವಾಗಿವೆ. ಈ ಪುಸ್ತಕಮಾಲೆಯನ್ನು ಪ್ರಾರಂಭಿಸಿದವರು ಮೈಸೂರು ವಿಶ್ವವಿದ್ಯಾನಿಲಯದ ವೈಸ್-ಛಾನ್‌ಸೆಲರ್ ಪದವಿಯಿಂದ ಈಗತಾನೆ ವಿಶ್ರಾಂತಿ ಪಡೆದಿರುವ ರಾಜಕಾರ್ಯಪ್ರವೀಣ ಶ್ರೀಮಾನ್ ಎನ್. ಎಸ್. ಸುಬ್ಬರಾಯರು; ಇದು ಯುಕ್ತವಾಗಿಯೇ ಇಷ್ಟೊಂದು ಜನಪ್ರಿಯವಾಗಿರುವುದನ್ನು

ನೋಡಿ ಅವರಿಗೆ ತುಂಬ ತೃಪ್ತಿಯುಂಟಾಗಿರಬೇಕು. ಈ ಪುಸ್ತಕಗಳನ್ನು ಯಾವ ಪ್ರತಿಫಲವೂ ಇಲ್ಲದೆ ಬರೆದುಕೊಟ್ಟಿರುವ ಗ್ರಂಥಕರ್ತರಿಗೆ ಮೈಸೂರು ವಿಶ್ವವಿದ್ಯಾನಿಲಯದ ವಂದನೆಗಳು ಸಲ್ಲಬೇಕಾಗಿವೆ. ಈ ಮಾತುಗಳನ್ನು ಮುಗಿಸುವುದಕ್ಕೆ ಮುಂಚೆ ಈ ಮಾಲೆಯ ಪ್ರಧಾನ ಸಂಪಾದಕರಾದ ಶ್ರೀಮಾನ್ ಜಿ. ಹನುಮಂತರಾಯರನ್ನು ಕುರಿತು ಮೆಚ್ಚಿಕೆಯ ಮಾತೊಂದನ್ನು ನಾನು ಆಡದಿದ್ದರೆ ಲೋಪವಾದೀತು. ಸಂಪಾದಕ ಕಾರ್ಯದಲ್ಲಿ ಇವರು ಸಲ್ಲಿಸಿರುವ ಕಾಲ, ಶಕ್ತಿ, ಶ್ರದ್ಧೆ ಇವು ಎಷ್ಟೆಂಬುದು ಅವರ ದುಡಿಮೆಯನ್ನು ಹತ್ತಿರದಿಂದ ನೋಡಿದವರಿಗೆ ಮಾತ್ರ ಗೊತ್ತಾಗಬಲ್ಲುದು. ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರಪುಸ್ತಕಮಾಲೆ ಇಂದಿನಂತೆಯೇ ಮುಂದೆಯೂ ಬಹುಕಾಲ ಜನಪ್ರಿಯವಾಗಿ ನಿಲ್ಲಲೆಂದು ಹಾರೈಸುತ್ತೇನೆ.

ಮೈಸೂರು
ತಾ॥ ೨೪-೪-೧೯೪೨

ಇ. ಜಿ. **ಮೆಕಾಲ್ಪೈನ್**
ವೈಸ್ ಛಾನ್ಸಲರ್

ವಿಷಯಾನುಕ್ರಮಣಿಕೆ

೧. ಪೀಠಿಕೆ ... ೧

೨. ಸರ್ವಜ್ಞನ ಕಾಲ, ದೇಶ, ಮತ ... ೩

೩. ಸರ್ವಜ್ಞವಚನಗಳ ಸ್ವರೂಪ ... ೧೦

೪. ದೇವರು—ಗುರು—ಜ್ಞಾನಿ ... ೧೩

೫. ಶಮದಮಾದಿ ಸಂಪತ್ತಿ ... ೨೧

೬. ವಿಧಿ—ಕರ್ಮ ... ೨೩

೭. ಧರ್ಮಗಳು—ಮತಗಳು ... ೨೫

೮. ಸಜ್ಜನರು—ದುರ್ಜನರು; ಅವರ ಸಹವಾಸ ... ೨೮

೯. ತ್ಯಾಗಬುದ್ಧಿ ... ೩೦

೧೦. ರಾಜ—ರಾಜಧರ್ಮ—ರಾಜಭಕ್ತಿ ... ೩೫

೧೧. ಸಂಸಾರ—ಹೆಂಗಸರು ... ೩೯

೧೨. ನಡೆ—ನುಡಿ ... ೪೧

೧೩. ಕಾಲಜ್ಞಾನ—ವಾದ—ವೈದ್ಯ ... ೪೫

೧೪. ಜ್ಯೋತಿಷ—ಶಕುನ ... ೪೮

೧೫. ಒಗಟುಗಳು ... ೪೯

೧೬. ನೀತಿಕಾವ್ಯ—ಸಾಹಿತ್ಯದಲ್ಲಿ ಅವರ ಸ್ಥಾನ ... ೫೧

೧೭. ಖಂಡನಕಾವ್ಯ—ವಿಡಂಬನಕಾವ್ಯ: ಅವುಗಳ ವಿಶೇಷ ಗುಣ ... ೫೨

೧೮. ಸರ್ವಜ್ಞನ ಶೈಲಿ ... ೫೩

೧೯. ತ್ರಿಪದಿ ... ೫೯

೨೦. ಕೊನೆಮಾತು ... ೬೨

೧. ಪೀಠಿಕೆ

ಕನ್ನಡಸಾಹಿತ್ಯ ಸುಮಾರು ಸಾವಿರದ ಐನೂರು ವರ್ಷಗಳ ಹಿಂದೆ ಆರಂಭವಾಯಿತು. ಆಗ ಗ್ರಂಥಗಳನ್ನು ಹೆಚ್ಚಾಗಿ ಬರೆದವರು ಜೈನರು. ಅವರು ಸಂಸ್ಕೃತ ಪ್ರಾಕೃತಗಳನ್ನು ತಿಳಿದ ಪಂಡಿತರಾಗಿದ್ದರು. ರಾಜಾಶ್ರಯದಲ್ಲಿ ಕಾವ್ಯರಚನೆ ಮಾಡಿದರು. ರಾಜನ ಮೆಚ್ಚಿಗೆಗಾಗಿಯೂ ರಾಜಾಸ್ಥಾನದಲ್ಲಿದ್ದ ವಿದ್ವಾಂಸರ ಒಪ್ಪಿಗೆಗಾಗಿಯೂ, ಬರೆದವುಗಳಾದ್ದರಿಂದ ಅವು ಪ್ರೌಢವಾಗಿಯೂ ಪಾಂಡಿತ್ಯದಿಂದ ಕೂಡಿದವಾಗಿಯೂ ಇದ್ದುವು. ಭಾಷೆಯಲ್ಲಿ ಸಂಸ್ಕೃತ ಹೆಚ್ಚು; ವಿಷಯ ಧಾರ್ಮಿಕ; ಶೈಲಿ ಕಠಿಣ; ಪದ್ಯವಾದರೆ ದೊಡ್ಡ ದೊಡ್ಡ ಸಂಸ್ಕೃತ ವೃತ್ತಗಳು; ಗದ್ಯವಾದರೆ ಅಲಂಕಾರಗಳಿಂದ ತುಂಬಿದ ಜಟಿಲ ವಾಕ್ಯಗಳು—ಹೀಗೆ ಇರುತ್ತಿತ್ತು. ಹೆಚ್ಚು ಜನಕ್ಕೆ ಅದರಲ್ಲಿಯೂ ವಿದ್ಯಾವಂತರಲ್ಲದ ಜನಸಾಮಾನ್ಯಕ್ಕೆ, ಯಾವುದಾದರೂ ಒಂದು ವಿಷಯವನ್ನು ತಿಳಿಸಬೇಕಾದರೆ ಅವರು ಆಡುವ ತಾಯಿಮಾತಿನಲ್ಲಿಯೇ ಸಾಧ್ಯ. ಈ ತತ್ವವನ್ನು ಬುದ್ಧ ಮಹಾವೀರ ಮುಂತಾದ ಮಹಾಪುರುಷರು ಗ್ರಹಿಸಿ, ಸಂಸ್ಕೃತ ಪ್ರಾಬಲ್ಯದ ಕಾಲದಲ್ಲಿಯೂ ತಮ್ಮ ಸಂದೇಶವನ್ನು ಜನರು ಆಡುತ್ತಿದ್ದ ಪ್ರಾಕೃತದಲ್ಲಿಯೇ ಬೋಧಿಸಿದ್ದರು. ಈ ತತ್ವವನ್ನು ಜೈನರೂ ಒಪ್ಪಿ ನಮ್ಮ ದೇಶದ ಜನಕ್ಕೆ ಬಳಕೆಯಾದ ಕನ್ನಡವನ್ನೇ ತಮ್ಮ ಕಾವ್ಯಕ್ಕೆ ಬಳಸಿಕೊಂಡರು: ಕನ್ನಡದಲ್ಲಿ ಸಾಹಿತ್ಯವು ಆರಂಭವಾಯಿತು. ಆದರೆ ಆಗ ಅವರಿಗೆ ಮೇಲ್ಪಂಕ್ತಿಯಾಗಿದ್ದುದು ಸಂಸ್ಕೃತ ಮಹಾಕಾವ್ಯ ಸಾಹಿತ್ಯ. ಇವುಗಳ ಮಾರ್ಗವನ್ನು ಅನುಸರಿಸಿ ಅವರು ರಾಮಾಯಣ ಭಾರತ ಮುಂತಾದ ಪುರಾಣ ಕಾವ್ಯಗಳನ್ನೂ ತೀರ್ಥಂಕರ ಚರಿತ್ರೆಗಳನ್ನೂ ಬರೆದರು. ಎಲ್ಲೋ

ಒಂದೆರಡು ಗದ್ಯಗ್ರಂಥಗಳೂ ಹುಟ್ಟಿದುವು. ಆದರೂ ಒಟ್ಟಿನ ಮೇಲೆ ಇವು ಪಂಡಿತರಿಗೆ ಸರಿ ಎನ್ನುವಂತಿದ್ದುವು. ಆದ್ದರಿಂದ ಹನ್ನೆರಡನೆಯ ಶತಮಾನದ ಹೊತ್ತಿಗೆ ಇವೇ ವಿಷಯಗಳನ್ನೇ ತೆಗೆದುಕೊಂಡು ಅವರು ಸುಲಭವಾಗಿ ಬರೆಯತೊಡಗಿದರು; ಕಥೆಗಳ ಮೂಲಕ ಉಪದೇಶಿಸಲು ಮೊದಲು ಮಾಡಿದರು; ನಿತ್ಯಗಟ್ಟಲೆಯಲ್ಲಿ ಬಳಕೆಯಾಗಿರುವ ಸಂಗತಿಗಳನ್ನೂ ಹಾಡು ಗಳನ್ನೂ ಉಪಯೋಗಿಸಿಕೊಂಡರು.

ಆದರೆ, ನಿಜವಾಗಿಯೂ ಭಾಷೆ ಸಾಹಿತ್ಯಗಳಲ್ಲಿ ಸೌಲಭ್ಯ ವನ್ನು ಕಲ್ಪಿಸಿಕೊಟ್ಟು ಸರಳವಾದ ಮಾತಿನಲ್ಲಿ ತಿಳಿವಳಿಕೆ ಕೊಟ್ಟವರು ವೀರಶೈವರು. ಇವರು ಹನ್ನೆರಡನೆಯ ಶತಮಾನದಿಂದ ಕನ್ನಡ ದಲ್ಲಿ ಗ್ರಂಥ ರಚನೆ ಮಾಡಿದರು. ಸಾವಿರಾರು ಜನ ಬರೆದರು; ಲಕ್ಷಾಂತರ ಜನ ಅದರ ಉಪಯೋಗವನ್ನು ಪಡೆದರು. ಏಕೆಂದರೆ, ಅವರು ಗದ್ಯವನ್ನು ಬರೆದರೆ ಆಡುವ ಮಾತಿನಲ್ಲಿ, ಬಳಕೆಯಲ್ಲಿದ್ದ ಮಾತುಗಳನ್ನೇ ಉಪಯೋಗಿಸಿಕೊಂಡು, ಬರೆಯುತ್ತಿದ್ದರು; ಪದ್ಯ ವನ್ನು ಬರೆದರೆ ಜನರ ಬಾಯಲ್ಲಿದ್ದು ಎಲ್ಲರೂ ಹೇಳಿ ಕೇಳಿ ಹಾಡುತ್ತಿದ್ದ ಷಟ್ಪದಿ, ಸಾಂಗತ್ಯ, ರಗಳೆ, ತ್ರಿಪದಿ, ಚೌಪದಿ ಮುಂತಾದ ಕನ್ನಡ ಪದ್ಯಜಾತಿಗಳನ್ನೇ ಉಪಯೋಗಿಸುತ್ತಿದ್ದರು. ಹೀಗೆ ಕನ್ನಡ ಬರೆಯುವುದೂ ಓದುವುದೂ ಸುಲಭವಾಯಿತು; ಅದು ನಮ್ಮದೆಂಬ ಭಾವನೆ ಹೆಚ್ಚಾಗಿ. ಮನಸ್ಸಿಗೆ ಅಂಟಿ, ಹೃದಯ ವನ್ನು ಹೊಕ್ಕು, ಜೀವನವನ್ನು ಹಸನುಮಾಡುವುದು ಸಾಧ್ಯ ವಾಯಿತು. ಸರ್ವಜ್ಞನು ಈ ಪಂಕ್ತಿಗೆ ಸೇರಿದ ಕವಿ.

೨. ಸರ್ವಜ್ಞನ ಕಾಲ, ದೇಶ, ಮತ

ಸರ್ವಜ್ಞನ ಕಾಲ, ದೇಶ, ಮುಂತಾದ ಸಂಗತಿಗಳಾಗಲಿ ತಾಯಿ, ತಂದೆ, ಗುರು ಮುಂತಾದವರ ವಿಚಾರವಾಗಲಿ ಯಾವುದೂ ನಿಷ್ಕರ್ಷೆಯಾಗಿ ಗೊತ್ತಾಗಿಲ್ಲ. ಅವನ ವಚನಗಳ ಭಾಷೆ ವಿಷಯ ಇವುಗಳ ಸ್ವರೂಪದ ಆಧಾರದ ಮೇಲೆ ಅವನ ಕಾಲವು ಸುಮಾರು ೧೬೦೦ ಎಂದು ಊಹಿಸುತ್ತಾರೆ. ಅವನ ವಚನಗಳಲ್ಲೇನೋ ಅವನ ಊರು, ತಾಯಿ, ತಂದೆ ಇವರ ಹೆಸರನ್ನು ಹೇಳಿದಂತಿದೆ; ಆದರೆ ಈ ವಚನಗಳನ್ನು ಅವನೇ ಬರೆದನೋ ಇನ್ನಾರಾದರೂ ಬರೆದರೋ ತಿಳಿಯದು. ಜನಪ್ರಿಯವಾದ ಹಿಂದಿನ ಗ್ರಂಥಗಳಲ್ಲಿ ಅವನ್ನು ಓದುವವರೆಲ್ಲ ತಾವು ಕೇಳಿದ್ದು, ತಿಳಿದದ್ದು, ಚೆನ್ನಾಗಿದೆ ಎಂದುಕೊಂಡದ್ದು ಇವುಗಳನ್ನು ಸೇರಿಸುವುದುಂಟು. ಹಾಗೇ ಸರ್ವಜ್ಞನ ಹೆಸರಿನಲ್ಲಿರುವ ಸಾವಿರಾರು ವಚನಗಳಲ್ಲಿ ಇತರರು ಬರೆದು ಸೇರಿಸಿರುವ ಹಲವು ಪದ್ಯಗಳಿರುವಂತೆ ತೋರುತ್ತದೆ. ಶ್ರೀಮಾನ್ ಚನ್ನಪ್ಪ ಉತ್ತಂಗಿ ಅವರು ಇವುಗಳನ್ನೆಲ್ಲ ಶೇಖರಿಸಿ, ಶೋಧಿಸಿ, ಬಹು ಕಷ್ಟಪಟ್ಟು ಸಂಪಾದನೆ ಮಾಡಿದ್ದಾರೆ. ಸರ್ವಜ್ಞನೇ ಬರೆದಿರಬಹುದಾದವು ಯಾವುವು, ಇತರರು ಬರೆದಿರಬಹುದಾದವು ಯಾವುವು ಎಂದು ಊಹಿಸಿ ಅಂಥ ಪದ್ಯಗಳನ್ನು ಗುರುತು ಮಾಡಿದ್ದಾರೆ. ಆದರೂ ಇದನ್ನು ಹೀಗೇ ಎಂದು ನಿರ್ಧರಿಸಿ ಹೇಳುವಂತಿಲ್ಲ. ಇವುಗಳಲ್ಲಿ ಕೆಲವು ಪದ್ಯಗಳಿಂದ ಮುಂದಿನ ಅಂಶಗಳು ತಿಳಿದುಬರುತ್ತವೆ: ಸರ್ವಜ್ಞನು ಶಿವನ ಹತ್ತಿರವಿದ್ದ ಪುಷ್ಪದತ್ತನೆಂಬ ಗಣನಾಥನ ಅವತಾರ; ಅವನು ಹುಟ್ಟಿದ್ದು ಅಂಬಲೂರಿನಲ್ಲಿ; ತಂದೆ ಮಾಸೂರಿನ ಬಸವರಸ ಅಥವಾ ಮಲ್ಲರಸ ಎಂಬ ಆರಾಧ್ಯ ಬ್ರಾಹ್ಮಣ; ತಾಯಿ ಮಾಳಿ: ಆಕೆ ಕುಂಬಾರಗಿತ್ತಿ; ಇತ್ಯಾದಿ.

ಮಾಸೂರು, ಅಂಬಲೂರು. ಇವು ಧಾರವಾಡ ಜಿಲ್ಲೆಯಲ್ಲಿರುವ ಊರುಗಳು. ಆದ್ದರಿಂದ ಸರ್ವಜ್ಞನು ಆ ಪ್ರಾಂತದಲ್ಲಿ ಹುಟ್ಟಿದವ ನಾಗಿದ್ದರೂ ಇರಬಹುದು. ಆದರೆ ತಾಯಿತಂದೆಗಳ ವಿಚಾರವೂ ಅವನ ವಿಚಾರವಾಗಿ ಹುಟ್ಟಿರುವ ಹಲವು ದಂತಕಥೆಗಳೂ ಎಷ್ಟರ ಮಟ್ಟಿಗೆ ನಂಬಲರ್ಹವೋ ಹೇಳುವುದಕ್ಕಾಗುವುದಿಲ್ಲ. ಅವನ ಬಾಲ್ಯ ವಿಚಾರ ನಮಗೆ ಏನೂ ಖಚಿತವಾಗಿ ಗೊತ್ತಿಲ್ಲವೆಂದು ಒಪ್ಪಿ ಕೊಳ್ಳುವುದೇ ಮೇಲು. ಅನೇಕ ಮಹಾಕವಿಗಳು ಅಜ್ಞಾತವಾದ ಸಣ್ಣಪುಟ್ಟ ಗ್ರಾಮಗಳಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು ತಮ್ಮ ಪ್ರಜ್ಞೆಯಿಂದಲೂ ಪ್ರತಿಭೆಯಿಂದಲೂ ಮುಂದೆ ಪ್ರಸಿದ್ಧಿಗೆ ಬರು ತ್ತಾರೆ. ಅವರು ತಾವಾಗಿ ತಮ್ಮ ವಿಚಾರವನ್ನು ಹೇಳಿಕೊಂಡರೆ ಉಂಟು, ಇಲ್ಲದಿದ್ದರೆ ಇಲ್ಲ. ಹೀಗೆ ಅವರು ಹೇಳಿಕೊಳ್ಳಬೇಕು, ಅದನ್ನು ಕೇಳಿದವರು ಆದರದಿಂದ ಕೇಳಿ ಸತ್ಯದೃಷ್ಟಿಯಿಂದ ಬರೆಯಬೇಕು; ಹಿಂದೆ ನಮ್ಮಲ್ಲಿ ಇವೆರಡೂ ಇರಲಿಲ್ಲ: ಈಗಿನಂತೆ ತನ್ನ ವಿಚಾರವನ್ನು ಯಾವುದೇ ಉದ್ದೇಶದಿಂದಾಗಲಿ, ಆತ್ಮಕಥೆ ಯಾಗಿ ಬರೆದಿಟ್ಟವನು ಒಬ್ಬನೂ ಇಲ್ಲ: ಅಲ್ಪಸ್ವಲ್ಪ ತನ್ನ ವಿಚಾರ ವನ್ನು ಬರೆದವರು ತಾನು ಕಾಳಿದಾಸನನ್ನು ಮೆಟ್ಟಿಕ್ಕಿದವನು. ವ್ಯಾಸ ವಾಲ್ಮೀಕಿಗಳನ್ನು ತನ್ನ ಮುಂದೆ ನಿವಾಳಿಸಬೇಕು ಎಂಬ ಗರ್ವದಿಂದ ಬರೆಯುತ್ತಾನೆ: ಇಲ್ಲದಿದ್ದರೆ, ಕೇವಲ ನಿಗರ್ವಿಯಾಗಿ ಅಹಂಕಾರ ಲೇಶವನ್ನೂ ಹತ್ತಿರ ಬರಗೊಡಿಸದೆ, ಗ್ರಂಥದ ಆದ್ಯಂತ ವಾಗಿ ಹುಡುಕಿದರೂ ತನ್ನ ಹೆಸರೂ ಕೂಡ ಕಾಣದಂತೆ ಬರೆದಿರು ತ್ತಾನೆ. ಆತ್ಮಕಥನವು ಅಷ್ಟು ಗ್ರಾಮ್ಯ, ತ್ಯಾಜ್ಯ, ತಾಮಸ ಬಾಧಕ ಎಂದು ಅವರು ಯೋಚಿಸುತ್ತಿದ್ದರು. ಕಾಮಕ್ರೋಧ ಗಳನ್ನು ಬಿಡಿ, ಅಹಂಕಾರ ಮಮಕಾರಗಳನ್ನು ತ್ಯಜಿಸಿ, ಎಂದು ಬೋಧಿಸುವವರು. ನಿರ್ವಂಚನೆಯಾಗಿ ಉಪದೇಶಿಸುವವರು

ತಮ್ಮ ಅಹಂಕಾರವನ್ನು ಬೆಳೆಯುಗೊಡುತ್ತಾರೆಯೇ? ಬೋಧನೆಗೆ ಆಚರಣೆಯೂ ವಿರುದ್ಧವಾಗಿದ್ದರೆ ಬೋಧಕನಿಗೂ ಅವನ ಮಾತಿಗೂ ಏನು ಬೆಲೆ ಇದ್ದೀತು? ಕೇಳುವವರೂ ಅಷ್ಟೇ: ತಾತ್ವಿಕಬುದ್ಧಿಯಿಂದಲೂ, ಸಾಹಿತ್ಯ ದೃಷ್ಟಿಯಿಂದಲೂ. ಕೇಳಿ ಬರೆಯುತ್ತಿದ್ದವರು ಇಲ್ಲವೇ ಇಲ್ಲವೆನ್ನಬಹುದು. ನೋಡಿದ್ದರಲ್ಲಿ ಕೇಳಿದ್ದರಲ್ಲಿ ಅತಿಶಯ ಕಂಡರೆ ಅದಕ್ಕೆ ಬೆರಗುಪಟ್ಟು ಅದರಲ್ಲಿ ಅತಿಶಯೋಕ್ತಿಯನ್ನೂ ಆಶ್ಚರ್ಯವನ್ನೂ ಕಲ್ಪಿಸುವವರೇ ಹಲವು ಜನ. ಹೀಗೆ ಪ್ರತಿಯೊಬ್ಬ ಮಹಾಕವಿಯೂ ಮಹಾಪುರುಷನೂ ದೇವಾಂಶಸಂಭೂತನಾಗಿಬಿಡುತ್ತಾನೆ. ಸರ್ವಜ್ಞನ ವಿಚಾರದಲ್ಲಿಯೂ ಹೀಗೆಯೇ ಆಗಿರುವಂತೆ ತೋರುತ್ತದೆ.

ಸರ್ವಜ್ಞನ ತ್ರಿಪದಿಗಳಲ್ಲಿ ಪ್ರಕ್ಷಿಪ್ತಭಾಗವಿರಬಹುದೆಂದು ಹಿಂದೆಯೇ ಹೇಳಿದೆಯಷ್ಟೆ; ಅವನ ಹೆಸರಿನಲ್ಲಿರುವ 'ಕಾಲಜ್ಞಾನ' ವಚನಗಳನ್ನು ನೋಡಿದರಂತೂ ಈ ಸಂದೇಹವು ಬಲವಾಗುತ್ತದೆ. ಇವುಗಳಲ್ಲಿ ಮೊನ್ನೆ ಮೊನ್ನೆ ನಡೆದ ಸಂಗತಿಗಳೂ ಸೇರಿಕೊಂಡಿವೆ. ಮಹಾಪುರುಷನಾದರೆ ಅವನು ಅದ್ಭುತಕಾರ್ಯಗಳನ್ನು ಮಾಡಬೇಕು, ಮುಂದೆ ಬರುವ ವೀರ ವಸಂತರಾಯನ ಕಾರ್ಯಕಲಾಪಗಳನ್ನು ತಿಳಿಸಬೇಕು, ಕಲಿಮಹಿಮೆಯನ್ನು ವಿವರಿಸಬೇಕು ಎಂದು ಜನ ತಿಳಿದುಕೊಂಡಿದ್ದಂತೆ ಕಾಣುತ್ತದೆ. ಎಲ್ಲರಿಗೂ ತಿಳಿದದ್ದನ್ನು ಇವನೂ ಹೇಳಿದರೆ ಇವನ ಮಹತ್ವವೇನು ಬಂತು? ಆದ್ದರಿಂದ ಇಂಥದರಲ್ಲಿ ಗೌರವವಿದ್ದವರು ಅವರ ಹೆಸರಿನಲ್ಲಿ ಕಾಲಜ್ಞಾನವಿಲ್ಲದಿದ್ದರೆ ಅದು ಒಂದು ಲೋಪವೆಂದು ಭಾವಿಸಿ ಸೇರಿಸುತ್ತಾರೆ. ಹೀಗೆ ವಿದ್ಯಾರಣ್ಯರ ಹೆಸರಿನಲ್ಲಿಯೂ ಒಂದು 'ಕಾಲಜ್ಞಾನ'ವಿದೆ. ಆ ಕಾಲಜ್ಞಾನವನ್ನು ಅವರೂ ಬರೆಯಲಿಲ್ಲ, ಈ ಕಾಲಜ್ಞಾನವನ್ನು ಇವನೂ ಬರೆಯಲಿಲ್ಲ; ಇದನ್ನು ಬರೆದವನು ಮತ್ತೊಬ್ಬ ಕವಿಯಾಗಿರುವುದು ಸಂಭವ.

'ಸರ್ವಜ್ಞ'ನ ಹೆಸರೇನು? ಸರ್ವಜ್ಞ ಎಂದೇಯೇ? ತಾಯಿ ತಂದೆಗಳು, ಹುಟ್ಟಿದ ಮಗುವಿಗೆ ಎಲ್ಲಿಯೂ ಈ ಹೆಸರನ್ನು ಇಟ್ಟಿದ್ದು ತಿಳಿದುಬಂದಿಲ್ಲ. ಸರ್ವಜ್ಞ, ಸುಗತ ಮುಂತಾದ ಹೆಸರುಗಳು ಬುದ್ಧನಿಗೆ ಉಂಟು. ಆದರೆ ಅವು ಅವನಿಗೆ ಅವನ ತಾಯಿ ತಂದೆಗಳು ಇಟ್ಟ ಹೆಸರಲ್ಲ. ವಯಸ್ಸು ಬಂದಮೇಲೆ ಈ ಹೆಸರನ್ನು ತಾನೇ ಇಟ್ಟುಕೊಂಡಿರಬಹುದೇ? ಇದೂ ಸಂಭವವಲ್ಲ; ಆಗ ಸರ್ವಜ್ಞನು ಅಹಂಕಾರದ ಮುದ್ದೆಯಾಗುತ್ತಾನೆ; ತನ್ನ ಗ್ರಂಥದ ತುಂಬ ನೀತಿಯನ್ನು ಹೇಳಿರುವವನು, ತಾನು ಸರ್ವಜ್ಞನೆಂದು ತಿಳಿದುಕೊಂಡಿರಲಾರನು, ಹೇಳಿಕೊಂಡಿರಲಾರನು:

ಸರ್ವಜ್ಞನೆಂಬವನು ಗರ್ವದಿಂದಾದವನೆ?
ಸರ್ವರೊಳೊಂದೊಂದು ನುಡಿಗಲಿತು ವಿದ್ಯದ
ಪರ್ವತವೆ ಆದ ಸರ್ವಜ್ಞ॥

ಸರ್ವಜ್ಞನೆಂದರೆ ಎಲ್ಲವನ್ನೂ ತಿಳಿದವನು; ಎಲ್ಲವನ್ನೂ ತಿಳಿದವನು ದೇವರೊಬ್ಬನು ಹೊರತು ಇನ್ನಾರಿರಬಲ್ಲರು? ತಿಳಿವನ್ನು ಕೊಡಬಲ್ಲವನೇ ಅವನು: ಅವನು ಜ್ಞಾನಸ್ವರೂಪ. ಕೊಟ್ಟ ತಿಳಿವನ್ನು ನುಡಿಸಬಲ್ಲವನು ಅವನು; ಆಡಿದ ನುಡಿಯೆಲ್ಲ ಅವನ ಹೊಗಳಿಕೆಯೇ. "ಸ್ತೋತ್ರಾಣಿ ಸರ್ವಾ ಗಿರಃ". ಈ ಮಾತನ್ನು ಅವನೇ

ಎನ್ನ ಮನಸಿಗೆ ಸೆನಹ ಪನ್ನಗಧರ ಕೊಟ್ಟ
ಚಿನ್ನಣದಿಂದ ಸ್ತುತಿಗೈದು ಪೊಗಳುವೆ
ಚೆನ್ನಮೂರುತಿಯ ಸರ್ವಜ್ಞ॥

ಎಂಬ ವಚನದಲ್ಲಿ ಹೇಳಿಕೊಂಡಂತಿದೆ.

ಇದು ಅವನಿಗೆ ಇತರರು ಕೊಟ್ಟ ಬಿರುದು ಎಂದು ಕೆಲವರು ಊಹಿಸುತ್ತಾರೆ. ಈ ಊಹೆಗೆ ಆಧಾರವಿಲ್ಲ. ಯಾರೋ ಕೊಟ್ಟ ಇಂಥ ಬಿಗುಮಾನದ ಬಿರುದನ್ನು ಅವನು ಪ್ರತಿ ವಚನಕ್ಕೂ ಸೇರಿಸಿ

ಕೊಂಡಿದ್ದಾನೆಂದರೆ ಒಪ್ಪುವ ಮಾತಲ್ಲ. ರಾಜಾಸ್ಥಾನದಲ್ಲಿದ್ದ ಮಹಾಕವಿಗಳು ತಮಗೆ ಬಂದ ಬಿರುದುಗಳನ್ನೂ, ತಾವು ಇಟ್ಟುಕೊಂಡ ಬಿರುದುಗಳನ್ನೂ, ಹಿಂದಿನ ಕಾವ್ಯಗಳಲ್ಲಿ ಮೆರೆದದ್ದುಂಟು. ಅದರಿಂದ ಆತ್ಮತೃಪ್ತಿಯ ಜೊತೆಗೆ, ಆಶ್ರಯದಾತನ ಸಂತೋಷವೂ ಆಸ್ಥಾನ ಕವಿಗಳ ದುಬ್ಬಿಯೂ ಬಂದಿದ್ದಿರಬಹುದು. ಆದರೆ ಸರ್ವಜ್ಞನು ಯಾವ ಆಸ್ಥಾನದಲ್ಲಿಯಾದರೂ ಇದ್ದು ಯಾರ ಹಂಗಿಗಾದರೂ ಸಿಕ್ಕಿ ಯಾರ್ಕ ಹೊಟ್ಟೆಯ ಕಿಚ್ಚನ್ನಾದರೂ ಎಬ್ಬಿಸಿ ತನ್ನ ಹೊಟ್ಟೆಯನ್ನು ತಣ್ಣಗೆ ಮಾಡಿಕೊಳ್ಳಬೇಕೆಂಬ ಮನೋಭಾವವುಳ್ಳವನಾಗಿದ್ದಂತೆ ತೋರುವುದಿಲ್ಲ. ಹಿಂದಿನ ವೀರಶೈವ ವಚನಗಳನ್ನೂ ದಾಸರ ಕೀರ್ತನೆಗಳನ್ನೂ ನೋಡಿದರೆ ಅವರು—ತಮ್ಮ ಹಾಡಿನ ಕೊನೆಗೆ ಅಂಕಿತ ಹಾಕುವುದು ಕಂಡುಬರುತ್ತದೆ. ಈ ಅಂಕಿತವು ಆಯಾ ವಚನಕಾರರ ಅಥವಾ ಕೀರ್ತನಕಾರರ ಇಷ್ಟ ದೇವತೆಯದಾಗಿರುತ್ತದೆ: ಕೂಡಲಸಂಗಮದೇವ, ಚನ್ನಮಲ್ಲಿಕಾರ್ಜುನ, ಗುಹೇಶ್ವರ, ಪುರಂದರವಿಠಲ ಇತ್ಯಾದಿ. ಅದರಂತೆ "ಸರ್ವಜ್ಞ" ಎಂಬುದು ಎಲ್ಲವನ್ನೂ ತಿಳಿದ ಜ್ಞಾನಸ್ವರೂಪನಾದ ಭಗವಂತನನ್ನು ಮನಸ್ಸಿನಲ್ಲಿಟ್ಟುಕೊಂಡು ಉಪಯೋಗಿಸಿರುವ ಅಂಕಿತವಾಗಿ ಕಾಣುತ್ತದೆ. ಆದರೆ ಸರ್ವಜ್ಞ ಎಂಬ ಹೆಸರುಳ್ಳ ಯಾವ ದೇವತೆಯೂ, ಯಾವ ಕ್ಷೇತ್ರದಲ್ಲಿಯೂ ಇಲ್ಲ. ಆದ್ದರಿಂದ ಸರ್ವಜ್ಞನು ಇಂಥ ಊರಿನವನು, ಇಂಥ ದೇವರ ಭಕ್ತ ಎಂದು ಹೇಳುವಹಾಗಿಲ್ಲ. ಅವನ ಇಷ್ಟದೇವತೆ "ಒಬ್ಬ ಸರ್ವಜ್ಞ ಕರ್ತನು. ಜಗಕೆಲ್ಲ ಒಬ್ಬನೇ ದೈವ!"

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳುತಂ
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನಸಂಗದಿಂದಲಱಿಯಲ್ ಸರ್ವಜ್ಞನಪ್ಪಂ ನರಂ
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನಸೋಮೇಶ್ವರಾ॥

ಎಂಬ ಸೋಮೇಶ್ವರಶತಕದ ಒಂದು ಪದ್ಯವನ್ನು ಎಲ್ಲರೂ ಓದಿದ್ದೇವೆ. ಇದಕ್ಕೂ ಈ ಸರ್ವಜ್ಞನಿಗೂ ಏನಾದರೂ ಸಂಬಂಧ ವಿದೆಯೋ ಏನೋ ತಿಳಿಯದು. ಸರ್ವಜ್ಞನಾಗಬೇಕಾದರೆ ದೇವರೇ ಆಗಬೇಕಾಗಿಲ್ಲ. ಮನುಷ್ಯನು ಸಂತತವಾಗಿ, ಶ್ರದ್ಧೆ ಯಿಟ್ಟು, ಕಲಿಯುತ್ತ ಹೋದರೆ ಎಲ್ಲವನ್ನೂ ತಿಳಿಯಬಹುದು. ಎಂಬುದು ಇದರ ಅಭಿಪ್ರಾಯ.

'ಸರ್ವಜ್ಞ' ಎಂಬುದು ಅಂಕಿತವೆಂದು ಒಪ್ಪಿಕೊಂಡರೆ, ಈ ಕವಿಯು ಯಾವ ಮತದವನೆಂದು ಅದರಿಂದಲೇ ಊಹಿಸುವುದು ಕಷ್ಟವಾಗುತ್ತದೆ. ಏಕೆಂದರೆ ಮೇಲೆ ಹೇಳಿದಂತೆ "ಸರ್ವಜ್ಞ" ಎಂಬ ಹೆಸರುಳ್ಳ ಯಾವ ಶೈವ ವೈಷ್ಣವ ಜೈನ ಬೌದ್ಧ ದೇವತೆಗಳೂ ತಿಳಿದುಬಂದಿಲ್ಲ. ಅವನ ಗ್ರಂಥವನ್ನು ನೋಡಿದರೆ, ಷಟ್‌ಸ್ಥಲ ಅಷ್ಟಾವರಣ ಮುಂತಾದ ವೀರಶೈವ ಧರ್ಮಕ್ಕೆ ಸಂಬಂಧಪಡುವ ಕೆಲವು ವಿಚಾರಗಳನ್ನು ಕುರಿತ ಪದ್ಯಗಳು ದೊರೆಯುತ್ತವೆ. ಆದ್ದ ರಿಂದ ಸರ್ವಜ್ಞನು ವೀರಶೈವನೆನ್ನಬಹುದು. 'ವಚನ'ಗಳು ಎಂದು ಅವನ ಪದ್ಯಗಳು ರೂಢಿಯಾಗಿರುವುದೂ ಇದನ್ನೇ ಸೂಚಿಸುತ್ತದೆ. ವಚನ ಎಂದರೆ ಮಾತು—ಹೇಳಿದ್ದು. ಆದರೆ ಇದಕ್ಕೆ ಗದ್ಯರೂಪವಾದ ಉಕ್ತಿ, ನೈತಿಕ ಧಾರ್ಮಿಕ ಭಾವಗಳನ್ನು ಒಳಗೊಂಡ ನುಡಿ, ಎಂಬ ಅರ್ಥವೂ ಇದೆ. ಇಂಥ 'ವಚನ' ಸಾಹಿತ್ಯವನ್ನು ಕನ್ನಡದಲ್ಲಿ ಸೃಷ್ಟಿಸಿ ಬೆಳೆಮಾಡಿದವರು ವೀರ ಶೈವರು.

ಸರ್ವಜ್ಞನು—

ಇಂದ್ರನಾನೆಯನೇಜು ಒಂದನೂ ಕೊಡಲರಿಯ
ಚಂದ್ರಶೇಖರನು ಮುದಿಯೆತ್ತನೇರು ಬೇ
ಕೆಂದುದನು ಕೊಡುವ ಸರ್ವಜ್ಞ ॥

ಎಂದೂ "ಮೂಜುಕಣ್ಣೇಶನೇ ದೈವ", "ಪರದೈವ ಈಶನಿಂದಲ್ಲ" "ದೈವವು ರುದ್ರನಿಂದಿಲ್ಲ" ಎಂದು ಮುಂತಾಗಿಯೂ ಶಿವನ ಪಾರಮ್ಯವನ್ನು ಹೊಗಳಿದ್ದರೂ, ಅವನ ಶಿವನು ಪುರಾಣ ಕೀರ್ತಿತನಾದ ಕೈಲಾಸಾಧಿಪತಿ ಮಹೇಶ್ವರನಲ್ಲ; ಅವನು ಈ ಸೃಷ್ಟಿಗೆಲ್ಲಾ ಆದಿಯಾದ ಚೈತನ್ಯ ಸ್ವರೂಪಿ—

ಆ ದೇವ ಈ ದೇವ ಮಾದೇವನೆನಬೇಡ
ಆ ದೇವರ ದೇವ ಭುವನ ಪ್ರಾಣಿಗಳಿ
ಗಾದವನೆ ದೇವ ಸರ್ವಜ್ಞ॥

ಈ ಸೃಷ್ಟಿಯ ಚಿತ್ರವಿಚಿತ್ರಗಳಿಗೂ ರಸರುಚಿಗಳಿಗೂ ಕಾರಣನಾದವನು ಅವನೇ: ಎಲ್ಲವೂ ಅವನ ವಿಲಾಸದ ವೈಭವಗಳೇ; ಅವನಂಥ ಶಿಲ್ಪಿ, ಕಲಾವಂತ, ಮತ್ತೊಬ್ಬನಿಲ್ಲ. ಅವನು ಸರ್ವಸಮರ್ಥ.

ಚಿತ್ರವನು ನವಿಲೊಳು ವಿಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧವರ್ಣಗಳಿಂದ
ಚಿತ್ರಿಸಿದರಾರು? ಸರ್ವಜ್ಞ॥

ಇಂಗಿನೊಳು ನಾತವನು ತೆಂಗಿನೊಳಗೆಳನೀರ
ಭೃಂಗ ಕೋಕಿಲೆಯ ಕಂಠದಿ ಗಾಯನವ
ತುಂಬಿದವರಾರು? ಸರ್ವಜ್ಞ॥

ಇಂಥ ದೇವರನ್ನು ಯಾರು ಒಪ್ಪುವುದಿಲ್ಲ? ಪೂಜಿಸುವುದಿಲ್ಲ? ದೇವರಿಗೆ ಈ ಗುಣಗಳನ್ನು ಹೇಳಿದರೆ ಜಾತಿ ಮತ ವೈಷಮ್ಯಗಳು ಏಕೆ ಬಂದಾವು?

೩. ಸರ್ವಜ್ಞ ವಚನಗಳ ಸ್ವರೂಪ

ಹಿಂದೆ, ಅದರಲ್ಲಿಯೂ ವಿಶೇಷವಾಗಿ ನಮ್ಮ ದೇಶದಲ್ಲಿ ಧರ್ಮಕ್ಕೆ ಪ್ರಾಧಾನ್ಯವಿತ್ತು. ಜನರು ಪುಣ್ಯ, ಪಾಪ, ಸ್ವರ್ಗ, ನರಕ, ದೇವರು, ಪರಲೋಕ ಇವುಗಳಲ್ಲಿ ನಂಬಿಕೆಯಿಟ್ಟುಕೊಂಡಿದ್ದರು. ಮೋಕ್ಷವೇ ಪರಮ ಪುರುಷಾರ್ಥವಾಗಿತ್ತು. ಅದಕ್ಕೆ ಧರ್ಮವೇ ಮುಖ್ಯ ಸಾಧನ, ಮೊದಲನೆಯ ಸಾಧನ. ಧರ್ಮಕ್ಕೆ ವಿರುದ್ಧವಲ್ಲದ ಅರ್ಥ, ಕಾಮ (ಎಂದರೆ ಸಂಪಾದನೆ, ಆಶೆ) ಇವೂ ಪುರುಷಾರ್ಥಗಳೇ; ಸತ್ಪ್ರವೃತ್ತಿಯೂ ಅದನ್ನು ಈಡೇರಿಸಲು ಬೇಕಾದ ಸಂಪತ್ತೂ ಇಲ್ಲದಿದ್ದರೆ ಧರ್ಮವು ನಡೆಯುವುದಿಲ್ಲ. ಹೇಗೆಂದರೆ, ಒಬ್ಬನಿಗೆ ದಾನಧರ್ಮಾದಿಗಳನ್ನು ಮಾಡಬೇಕೆಂಬ ಮನಸ್ಸೂ, ಮಾಡಲು ಬೇಕಾದ ಹಣವೂ, ಇಲ್ಲದಿದ್ದರೆ ಅವನು ದಾನಮಾಡುವುದು ಹೇಗೆ? ಧರ್ಮಗಳಿಸುವುದು ಹೇಗೆ? ಬರಿಯ ಕೈಯಲ್ಲಿ ಮೊಳಹಾಕುವುದರಿಂದ ಏನು ಪ್ರಯೋಜನ? ಆದ್ದರಿಂದ ಹಿಂದಿನ ಗ್ರಂಥಗಳು ಮೋಕ್ಷವನ್ನೂ ಅದಕ್ಕೆ ಸಾಧಕವಾಗಿ ಭಕ್ತಿ ಜ್ಞಾನ ವೈರಾಗ್ಯಗಳನ್ನೂ ಬೋಧಿಸುವುದರ ಜೊತೆಗೆ, ಇಹಲೋಕದಲ್ಲಿರುವವರಿಗೆ ಸದಾಚಾರವನ್ನೂ ಬೋಧಿಸುತ್ತವೆ. ಇದೇ ಲೌಕಿಕ ನೀತಿ. ಇಲ್ಲಿ ಬದುಕಿರುವವರೆಗೆ ಒಳ್ಳೆಯ ನಡತೆಯಲ್ಲಿ ನಡೆದರೆ ಪರದಲ್ಲಿ ಸದ್ಗತಿ ದೊರೆತೇ ದೊರೆಯುತ್ತದೆ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನು. ಅಷ್ಟೇ ಅಲ್ಲ; ಇಲ್ಲಿಯೇ ಜ್ಞಾನಪಡೆದು, ಜೀವನ್ಮುಕ್ತನಾಗಬಹುದು. ಹಾಗೆ ಜ್ಞಾನಿಯಾದವನು ಈ ಲೋಕದಲ್ಲಿ, ಸಂಸಾರ ಮಧ್ಯದಲ್ಲಿ, ಇದ್ದರೂ ಚಿಪ್ಪು ಬಿಟ್ಟ ಗಿಟಕಿನಂತೆ ಮುಕ್ತನಾಗಿಯೇ ಇರುತ್ತಾನೆ. ಕಾಲಕ್ರಮದಲ್ಲಿ ದೇಹ ಬಿದ್ದುಹೋದರೆ, ಅಂಥ ಜೀವಕ್ಕೆ ಮತ್ತೆ ಅದರ ಸಂಬಂಧ ಬರುವುದಿಲ್ಲ.

ಶಾಸ್ತ್ರಗಳೂ ಧಾರ್ಮಿಕ ಕಾವ್ಯಗಳೂ ಇದನ್ನೇ ಪೂರ್ತಿಯಾಗಿಯೋ ಪ್ರಧಾನವಾಗಿಯೋ ಹೇಳುತ್ತವೆ. ಲೌಕಿಕ ಕಾವ್ಯಗಳಲ್ಲಿ ಯಾವನೋ ಒಬ್ಬ ರಾಜನ ಅಥವಾ ಮಹಾಪುರುಷನ ಕಥೆ ಬಂದರೂ, ಅದರ ಹಿನ್ನೆಲೆ ಉದ್ದೇಶ ಇವೆಲ್ಲವೂ ಧಾರ್ಮಿಕವಾಗಿಯೇ ಇರುತ್ತವೆ. ಈ ಲೋಕದಲ್ಲಿ ಇರುವ ತನಕ ಅವನು ಹೇಗೆ ಹತ್ತುಜನಕ್ಕೆ ಮೇಲ್ಪಂಕ್ತಿಯಾಗಿದ್ದು, ಒಳ್ಳೆಯ ನಡತೆ ನಡೆದು ಕೊನೆಗೆ ಸದ್ಗತಿ ಪಡೆದನೆಂದು ಅವು ದೃಷ್ಟಾಂತ ಪಡಿಸುತ್ತವೆ. ನೀತಿಯನ್ನುಳಿದು ಧರ್ಮವಿಲ್ಲ; ಸದಾಚಾರವಿಲ್ಲದೆ ಸದ್ಗತಿಯಿಲ್ಲ; ಇಹವಿಲ್ಲದೆ ಪರವಿಲ್ಲ; ಇಹದಲ್ಲಿ ಹತ್ತು ಮೆಟ್ಟಲನ್ನು ಹತ್ತಿದರೆ ಹನ್ನೊಂದನೆಯ ಮೆಟ್ಟಲೇ ಪರ. ಆದ್ದರಿಂದ ಧರ್ಮವನ್ನು ಬೋಧಿಸುತ್ತೇವೆಂದು ಹೊರಡುವವರು, ಮೊದಲು ತಳಹದಿಯಾಗಿ ಶಮದಮಾದಿ ಸಂಪತ್ತಿಯನ್ನು ವಿವರಿಸುತ್ತಾರೆ; ನೀತಿಯನ್ನು ಬೋಧಿಸುತ್ತೇವೆಂದು ಹೊರಡುವವರು ಅದರ ಫಲವು ಶಾಂತಿ, ಸೌಖ್ಯ, ಸದ್ಗತಿ ಎನ್ನುತ್ತಾರೆ. ಹೀಗೆ ತಮಿಳಿನಲ್ಲಿ ಪ್ರಸಿದ್ಧವಾದ ಕುಱಳ್ ಎಂಬ ಪ್ರಾಚೀನ ನೀತಿಕಾವ್ಯವು ಅಱಂ, ಪೊರುಳ್, ಇನ್ಬಂ (ಧರ್ಮ, ಅರ್ಥ, ಕಾಮ) ಎಂದು ಮೂರು ಭಾಗವಾಗಿದೆ; ಭರ್ತೃಹರಿಯ ನೀತಿ ಗ್ರಂಥವು ನೀತಿ ಶತಕ, ಶೃಂಗಾರ ಶತಕ, ವೈರಾಗ್ಯ ಶತಕ ಎಂದು ಮೂರು ಭಾಗದಲ್ಲಿದೆ. ನೀತಿಯನ್ನು ಅನುಸರಿಸಿ ಧರ್ಮದಲ್ಲಿ ನಡೆದರೆ ಜ್ಞಾನವೂ ಮೋಕ್ಷವೂ ತಾವಾಗಿ ಲಭಿಸುವುದೆಂಬುದು ಅವರ ಭಾವವಾಗಿ ಕಾಣುತ್ತದೆ. ವೀರಶೈವ ವಚನಕಾರರೂ ಹೀಗೆ ಮೊದಲ ಮೂರು 'ಸ್ಥಲ'ಗಳಲ್ಲಿ ಬೋಧಿಸುವುದು ಸದಾಚಾರ ಸತ್ಕರ್ಮಗಳೇ. ಅವುಗಳ ಫಲವಾಗಿ ಮುಂದಿನ ಮೂರು ಸ್ಥಲಗಳಲ್ಲಿ ಜೀವವು ಹೆಚ್ಚು ಹೆಚ್ಚಾಗಿ ಸಂಸ್ಕಾರ ಹೊಂದಿ, ಕೊನೆಗೆ "ಲಿಂಗ"ದಲ್ಲಿ ಸಮರಸವಾಗಿ ಸೇರಿಹೋಗುತ್ತದೆ. ಆದರೆ ವಚನ

ಗಳಲ್ಲಿ ಈ ಸ್ಥಲ ಭೇದಗಳನ್ನು ಸಾಮಾನ್ಯವಾಗಿ, ನಾವು ಕಂಡು ಕೊಳ್ಳಬಹುದಾದರೂ ಎಲ್ಲ ವಚನಕಾರರೂ ಹೀಗೆ ವಿಭಾಗಮಾಡಿ ಕೊಂಡೇನೂ ತಮ್ಮ ವಚನಗಳನ್ನು ಬರೆದಿಟ್ಟಿಲ್ಲ; ಅನೇಕ ವಚನ ಗಳನ್ನು ಶರಣರು ಸ್ಫೂರ್ತಿ ಬಂದಾಗ ಅಂದು, ಅವು ತಮ್ಮ ಅಂತಸ್ಸತ್ವದಿಂದಲೂ ಸತ್ಯಸಾರದಿಂದಲೂ ಒಬ್ಬರ ಬಾಯಿಂದ ಇನ್ನೊಬ್ಬರ ಬಾಯಿಗೆ ಬಿದ್ದು ವಚನಕರ್ತೃಗಳ ಎಷ್ಟೋ ಕಾಲದ ಅನಂತರ ಬರಹಕ್ಕೂ ಪುಸ್ತಕ ರೂಪಕ್ಕೂ ಬಂದಂತೆ ತೋರುತ್ತದೆ. ಈಗ ಪ್ರಕಟವಾಗಿರುವ ಅನೇಕ ವಚನಗ್ರಂಥಗಳಲ್ಲಿ ಭಕ್ತ ಮಾಹೇಶ್ವರ ಮುಂತಾದ ವಿಭಾಗಗಳು ಆಯಾ ಸಂಪಾದಕರು ಮಾಡಿಕೊಂಡವು. ಇದರಂತೆ ಸರ್ವಜ್ಞನ "ವಚನ"ಗಳೂ ಕೂಡ. ಅವು ಪ್ರಾಸಬದ್ಧವಾದ, ವಡಿಬದ್ಧವಾದ ತ್ರಿಪದಿಗಳು. ಆದ್ದರಿಂದ ಅವನ್ನು ಸರ್ವಜ್ಞನು ವಚನಕಾರರಂತೆ, ಅಪ್ರಯತ್ನವಾಗಿ, ತನ್ಮಯ ನಾಗಿ, ಸ್ಫೂರ್ತಿಮತ್ತಾಗಿ ಎಲ್ಲಿಯೋ ಅಂದುಬಿಟ್ಟು ಹೋದನೆಂದು ಹೇಳುವಹಾಗಿಲ್ಲ. ಆದರೆ, ಧರ್ಮ, ಅರ್ಥ, ಕಾಮ, ಮೋಕ್ಷ, ನೀತಿ, ಜ್ಞಾನ, ಸದಾಚಾರ, ಸದ್ಗತಿ, ಲೌಕಿಕ, ಪಾರಮಾರ್ಥಿಕ ಎಂದು ಮುಂತಾಗಿ ಯಾವ ವಿಭಾಗ ಕ್ರಮವನ್ನೂ ಮನಸ್ಸಿನಲ್ಲಿ ಟ್ಟುಕೊಂಡು, ಕವಿಗಳೂ ಕಥೆಗಾರರೂ ಒಂದು ಪರಿಚ್ಛೇದವಾಗು ತ್ತಲೂ ಮತ್ತೊಂದು ಪರಿಚ್ಛೇದವನ್ನು ಬರೆಯುವಂತೆ, ಕ್ರಮ ವರಿತು ಕಟ್ಟಿಗೆ ಸಿಕ್ಕಿ ಬರೆದಿಲ್ಲ; ಬರೆದಿಡಬೇಕೆಂದು ಆಸೆಯೂ ಅವನಿಗೆ ಇದ್ದಂತೆ ತೋರುವುದಿಲ್ಲ. ಆದರೆ ಗದ್ಯ ವಚನಗಳಿ ಗಿಂತಲೂ ಇವು ಬಿಗಿಯಾಗಿ, ಸೊಗಸಾಗಿ ರಾಗದಲ್ಲಿದ್ದದ್ದರಿಂದ ಹೆಚ್ಚಾಗಿ ಮನಸ್ಸಿಗೆ ಅಂಟಿ, ನಾಟಿ, ದೃಢವಾಗಿ ನಿಂತಿರಬೇಕು, ಅಷ್ಟೆ. ನಮ್ಮ ಅನುಕೂಲಕ್ಕೋಸ್ಕರ ನಾವು ಅವುಗಳನ್ನು ವಿಚಾರಾನುಸಾರವಾಗಿ ವಿಭಾಗ ಮಾಡಿಕೊಳ್ಳಬಹುದು.

೪. ದೇವರು-ಗುರು-ಜ್ಞಾನಿ

ವೀರಶೈವರು ಶಿವಭಕ್ತರಾದರೂ ಅವರ ಚರಮಲಕ್ಷ್ಯ ಕೈಲಾಸದಲ್ಲಿ ಗಿರಿಜೆಯೊಡನೆಯೂ ಗಣಗಳೊಡನೆಯೂ ಕೂಡಿಕೊಂಡು ಕೇಳಿದ್ದನ್ನು ಕೊಡಬಲ್ಲ ಮಹೇಶ್ವರನಲ್ಲ; ಅವನನ್ನು ಒಲಿಸಿಕೊಂಡು ಅವನೊಡನೆ ಸಾಲೋಕ್ಯ ಸಾರೂಪ್ಯಗಳನ್ನು ಪಡೆಯುವುದಲ್ಲ. ಅವರ ಧರ್ಮವು ಭಕ್ತಿಯಿಂದ ಮೊದಲಾದರೂ ಆ ಭಕ್ತಿಗೆ ವಿಷಯನಾದವನು ಲಿಂಗಸ್ವರೂಪಿಯಾದ ಸೂಕ್ಷ್ಮವಸ್ತು. ಅದಕ್ಕೆ

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕೆ
ದೇಗುಲವೆ ಇಲ್ಲ ಸರ್ವಜ್ಞ॥

ಇದು ದೊರೆಯಬೇಕಾದರೆ ಗುರುಸಹಾಯಬೇಕು.

ಪರ ತನ್ನೊಳಿರ್ದು ಗುರು ತೋರದೇ ತಿಳಿವುದೇ
ಮರದೊಳಗಗ್ನಿಯಿರುತಿರ್ದು ತನ್ನ ತಾ
ಸುಡದಿಹುದೇಕೆಂದ ಸರ್ವಜ್ಞ॥

ಈ ಗುರುವು ವಿದ್ಯಾವಂತನಾಗಲಿ, ಬ್ರಾಹ್ಮಣನಾಗಲಿ ಮಠಾಧಿಪತಿಯಾಗಲಿ ಆಗಬೇಕೆಂಬುದಿಲ್ಲ. ಅವನು ಸಾರವಾದ ಸತ್ಯವಸ್ತುವನ್ನು ಅರಿತವನಾಗಿದ್ದರೆ ಸರಿ.

ಊರಿಂಗೆ ದಾರಿಯನು ಯಾರು ತೋರಿದೊಡೇನು
ಸಾರಾಯದಾ ನಿಜವ ತೋರುವ ಗುರುವು
ಯಾರಾದೊಡೇನು ಸರ್ವಜ್ಞ॥

ಆಗ ಅದು, ಮೊಸರನ್ನು ಕಡೆದರೆ ಬೆಣ್ಣೆ ಸಿಕ್ಕುವಂತೆ, ಉಂಡೆಯಾಗಿ ಕೈಗೆ ಸಿಕ್ಕುತ್ತದೆ. ಆದರೆ ಶಿಷ್ಯನೂ ಯೋಗ್ಯನಾಗಿರಬೇಕು; ತಕ್ಕ ಅಧಿಕಾರಿಯಾಗಿರಬೇಕು: ಇಲ್ಲದಿದ್ದರೆ ಯಾವ ಗುರುವಿನ ಆಟವೂ ನಡೆಯುವುದಿಲ್ಲ. ಏಕೆಂದರೆ

ಶ್ವಾನ ತೆಂಗಿನಕಾಯ ತಾನು ಮೆಲಬಲ್ಲುದೇ?
ಹೀನಮನದವನಿಗುಪದೇಶವಿತ್ತಡೆ
ಹಾನಿ ಕಾಣಯ್ಯ ಸರ್ವಜ್ಞ॥

ಪಶಿಯು ಸಮಿಧೆಯು ತಂದು ಹೊಸೆದರುಂಟೇ ಕಿಚ್ಚು?
ವಿಷಯಂಗಳುಳ್ಳ ಮನುಜಗೆ ಗುರುಕರುಣ
ವಶವರ್ತಿಯಹುದೆ? ಸರ್ವಜ್ಞ ॥

ಹಾಗಲ್ಲದೆ ಶಿಷ್ಯನು ಯೋಗ್ಯನಾಗಿದ್ದು ಅವನಿಗೆ ಸದ್ಗುರುವು ದೊರೆತರೆ "ಮೋಕ್ಷವೆಂಬುದು ತಾನು ಒಮ್ಮಾರು ದೂರ!" ಕೈ ನೀಡಿದರೆ ಸಾಕು, ಸಿಕ್ಕುತ್ತದೆ.

ಗುರುಪಾದಸೇವೆ ತಾ ದೊರಕೊಂಡಿತಾದಡೆ
ಹಿರಿದಪ್ಪ ಪಾಪ ಹರಿವುದು ಕರ್ಪೂರದ
ಗಿರಿಯು ಬೆಂದಂತೆ ಸರ್ವಜ್ಞ ॥

ಅಜ್ಞಾನವು ಬೆಟ್ಟದಂತೆ ಕವಿದುಕೊಂಡಿದ್ದರೂ ಅದು ಕ್ಷಣ ಮಾತ್ರದಲ್ಲಿ ನಿರ್ನಾಮವಾಗುವುದು.

ದೇವರು ಸರ್ವವ್ಯಾಪಿಯಾಗಿರುವುದರಿಂದ ಅವನು ನಮ್ಮ ಲ್ಲಿಯೂ ಇರಲೇಬೇಕಷ್ಟೆ.

ಸಣ್ಣನೆಯ ಮಳಲೊಳಗೆ ನುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆವ ಪಟದೊಳಗೆ ಇರುವಾತ
ತನ್ನೊಳಗೆ ಇರನೆ ಸರ್ವಜ್ಞ॥

ಕಲ್ಲಿನಲಿ ಮಣ್ಣಿನಲಿ ಮುಳ್ಳಿನಾ ಮೊನೆಯಲ್ಲಿ
ಎಲ್ಲಿ ನೆನೆದಲ್ಲಿ ಶಿವನಿರ್ಪ ಅವ ನೀನಿ
ದ್ದಲ್ಲಿಯೇ ಇರುವ ಸರ್ವಜ್ಞ॥

ಸತ್ಯವೆಂಬುದು ತಾನು ಹಿತ್ತಲದ ಗಿಡ ನೋಡ
ಮತ್ತೆಲ್ಲಿ ನೋಡಿ ಅರಸದೆ ತಾನಿರ್ದ
ಹತ್ತಿಲೇ ನೋಡ ಸರ್ವಜ್ಞ॥

ತನಗಿಂತ ಹತ್ತಿರವಾದ ಸ್ಥಳವಾವುದು? ತನ್ನ ವಸ್ತುವಿಗಿಂತ ಹೆಚ್ಚಾಗಿ ಅನುಭವಕ್ಕೆ ಬರಬಲ್ಲದ್ದಾವುದು? ಆದ್ದರಿಂದ ಗುಡಿಗೆ ಹೋಗಿ ಪ್ರತಿಮೆಗಳನ್ನು ಪೂಜಿಸುವುದು ನಿಷ್ಪ್ರಯೋಜನ—

ತನ್ನಲಿಹ ಲಿಂಗವನು ಮನ್ನಿಸಲಿಕಱಿಯದೇ
ಬಿನ್ನಣದಿ ಕಡೆದ ಪ್ರತಿಮೆಗಳಿಗೆಱಗುವ
ಅನ್ನೆಯವ ನೋಡು ಸರ್ವಜ್ಞ॥

ಕಲ್ಲುಕಲ್ಲನೆ ಒಟ್ಟಿ ಕಲ್ಲಿನಲಿ ಮನೆಕಟ್ಟಿ
ಕಲ್ಲಮೇಲ್ಕಲ್ಲ ಕೊಳುವ ಮಾನವರೆಲ್ಲ
ಕಲ್ಲಿನಂತಿಹರು ಸರ್ವಜ್ಞ॥

ಕಲ್ಲಿನ ದೇವಾಲಯವನ್ನು ಕಟ್ಟಿ ಅದರಲ್ಲಿ ಕಲ್ಲಿನ ವಿಗ್ರಹವನ್ನೋ ಲಿಂಗವನ್ನೋ ದೇವರೆ ಪ್ರತಿಷ್ಠಿಸಿದನೆಂಧರೆ, ಅದು ಕಲ್ಲಮೇಲೆ ಕಲ್ಲಿಟ್ಟಂತಲ್ಲದೇ ಮತ್ತೇನು? ಕಲ್ಲಿಗಿಂತ ತನ್ನಲ್ಲಿ ಪರಮಾತ್ಮನು ಹೆಚ್ಚಾಗಿ ವಿಕಾಸಗೊಂಡಿಲ್ಲವೇ? ಇದನ್ನು ಅರಿಯದೇ ಹೋದರೆ ಮನುಷ್ಯನೂ ಕಲ್ಲಿನಂತೆಯೇ ಅಚೇತನನೂ ಜಡನೂ ಆಗಲಿಲ್ಲವೇ?

ಕಲ್ಲುಗುಂಡಿನಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಿಲ್ಲ
ದಿಲ್ಲ ಕಾಣಯ್ಯ ಸರ್ವಜ್ಞ॥

ಇದು ನಿಜವಾದ ಪೂಜೆಯಲ್ಲ; ಬರಿಯ ಕಾಯಕ್ಲೇಶ. ಪೂಜೆಯ ಫಲ ಜ್ಞಾನ. ಅದೇ ಪರಮ ಪುರುಷಾರ್ಥ:

ಏನಾದಡೇನಯ್ಯ ತಾನಾಗದಿರುವನಕ
ತಾನಾಗಿ ತನ್ನನಱಿದಿಪ್ಪ ಜ್ಞಾನಿಯು
ಏನಾದಡೇನು ಸರ್ವಜ್ಞ॥

ಹೀಗೆ ಜ್ಞಾನರೂಪಿಯಾದ ಪರಾತ್ಪರ ವಸ್ತುವೇ ಪರಮಲಕ್ಷ್ಯ ವಾದರೂ ಅದು ಎಲ್ಲರಿಗೂ ತಟ್ಟನೆ ಲಭಿಸುವುದಿಲ್ಲ; ಅದಕ್ಕೆ ಭಕ್ತಿ

ಬೇಕು; ಆ ಭಕ್ತಿಯಲ್ಲಿ ಶ್ರದ್ಧೆಯೂ ನಿಷ್ಠೆಯೂ ಇರಬೇಕು
ಅಂಥ ದೃಢಭಕ್ತಿಯಿಂದಲೇ ಗುರಿಯನ್ನು ಗೆಲ್ಲುವುದು ಸಾಧ್ಯ
ಚಿತ್ತೈಕಾಗ್ರತೆಯನ್ನೂ ಚಿತ್ತಶುದ್ಧಿಯನ್ನೂ ತಾರದ ನಿರರ್ಥಕವಾದ
ಬಾಹ್ಯಾಚಾರಗಳಿಂದ ಎಳ್ಳಷ್ಟೂ ಪ್ರಯೋಜನವಿಲ್ಲ; ಅಂಥ ಪೂಜಾ
ಪುರಸ್ಕಾರಗಳೂ ಜಪತಪಗಳೂ ಪ್ರದಕ್ಷಿಣೆ ನಮಸ್ಕಾರಗಳೂ
ವ್ಯರ್ಥ.

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ॥

ಬತ್ತಿ ಹೆತ್ತುಪ್ಪವನು ಹತ್ತಿಸದ ಫಲವೇನು
ನಿತ್ಯನೆಲೆಗೊಳಿದೆ ಭಜಿಸುವಾ ಪೂಜೆಯು
ಹತ್ತಿಗೇಡೆಂದ ಸರ್ವಜ್ಞ॥

ಇದರಿಂದ ಅಜ್ಞಾನಾಂಧಕಾರ ಹೋಗುವುದಿಲ್ಲ. ಅದಕ್ಕೆ ಬೇರೆ
ವಿಧವಾದ ದೀಪ ಹೊತ್ತಿಸಬೇಕು—

ಧ್ಯಾನದಾ ಹೊಸಬತ್ತಿ ಮೌನದಾ ತಿಳಿಮುಪ್ಪ
ಸ್ವಾನುಭವವೆಂಬ ಬೆಳಗಿನಾ ಜ್ಯೋತಿಯು
ಜ್ಞಾನವಂ ಸುಡುಗು ಸರ್ವಜ್ಞ॥

ಎಣಿಸುತಿರ್ಪುದು ಬೆರಳು ಗುಣಿಸುತಿರ್ಪುದು ಜಿಹ್ವೆ
ಮನ ಹೋಗಿ ಹಲವ ನೆನೆದರೆ ಹಾಳೂರ
ಶುನಕನಂತಕ್ಕು ಸರ್ವಜ್ಞ॥

ಅಂತರ್ಮುಖಿಯಾಗಿ, ಧ್ಯಾನಶೀಲನಾಗಿ, ಮಾನಸಪೂಜೆಮಾಡ
ವವನು ಮನೆಯಲ್ಲಿಯೇ ಇದ್ದು ಮಠವಾಸಿಗಳಿಗಿಂತ ಉತ್ತಮ
ವನ್ನು ಪಡೆಯಬಹುದು; ಹಾಗಿಲ್ಲದವನು ದೇವರಪೂಜಾರಿಯಾ
ಗಿದ್ದು ಸದಾ ದೇವಾಲಯದಲ್ಲಿಯೇ ಸೇರಿಕೊಂಡಿದ್ದರೂ ಏನೂ
ಪ್ರಯೋಜನವಿಲ್ಲ—

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು?
ಮನದಲ್ಲಿ ನೆನೆಯದಿರುವವನು ದೇಗುಲದ
ಕೊನೆಯಲಿದ್ದೇನು ಸರ್ವಜ್ಞ॥

ಪಾರಮಾರ್ಥಿಕವು ಕೇವಲ ಕೆಲವು ಬಾಹ್ಯಾಚಾರಗಳಿಂದ ಪಡೆಯುವಷ್ಟು ಸುಲಭವಲ್ಲ—

ಮುಟ್ಟಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ
ನೆಟ್ಟನೆ ಸ್ವರ್ಗಪಡೆವಡೆ ಸಾಣೆಕಲ್
ಕೆಟ್ಟು ಕೇಡೇನು ಸರ್ವಜ್ಞ॥

ನಿತ್ಯ ನೀಮುಳುಗುವನು ಹತ್ತಿದಡೆ ಸ್ವರ್ಗವನು
ಎತ್ತಿ ಜನ್ಮವನು ಜಲದಿಪ್ಪ ಕಪ್ಪೆಯು
ಹತ್ತದೇಕೆಂದ ಸರ್ವಜ್ಞ॥

ಸುಟ್ಟ ಬೂದಿಯ ತಂದು ದಟ್ಟವಾಗಿಯೆ ಬಡಿದು
ಶ್ರೇಷ್ಠಸ್ವರ್ಗವನು ಅಡರುವಡೆ ಕತ್ತೆ ತಾ
ಕೆಟ್ಟು ಕೇಡೇನು ಸರ್ವಜ್ಞ॥

ದೊಡ್ಡದಾಗಿ ಗಂಧಾಕ್ಷತೆಗಳನ್ನೂ ವಿಭೂತಿಯ ಪಟ್ಟೆಗಳನ್ನೂ ನಾಮ ಮುದ್ರೆಗಳನ್ನೂ ಧರಿಸಿದರೆ ಅಷ್ಟು ಮಾತ್ರದಿಂದ ತಾವು ವೈದಿಕರೆಂದೂ ಆಚಾರವಂತರೆಂದೂ ದೇವರಿಗೆ ಮೆಚ್ಚುಗೆಯಾದವರೆಂದೂ ಯಾರೂ ತಿಳಿದುಕೊಳ್ಳದಿರಲಿ:

ಖಂಡಿಸದೆ ಕರಣವನು ದಂಡಿಸದೆ ದೇಹವನು
ಉಂಡುಂಡು ಸ್ವರ್ಗಕಯ್ದುಲ್ಕೆ ಅದನೇನು
ರಂಡೆಯಾಳುವಳೆ ಸರ್ವಜ್ಞ॥

ಈ ವಿಧವಾದ ಭ್ರಾಂತಿಯುಳ್ಳ ಜನರು ಎಲ್ಲಾ ದೇಶದಲ್ಲಿಯೂ ಎಲ್ಲಾ ಕಾಲದಲ್ಲಿಯೂ ಇರುತ್ತಾರೆ. ಇದರ ಫಲ ಅವರಿಗೆ ಅಹಂಕಾರ; ಅವರನ್ನು ನೋಡಿ ಬೆರಗಾಗುವ ಅರಿಯದ ಜನಕ್ಕೆ ಅಜ್ಞಾನ. ಹೀಗೆ, ತತ್ವವನ್ನು ಅರಿಯದೆ, ತಾವೂ ಭ್ರಾಂತರಾಗಿ

ಇತರರನ್ನೂ ಮರುಳು ಮಾಡುವವರನ್ನು ಸರ್ವಜ್ಞನು ಕತ್ತೆಗ
ಮರಕ್ಕೂ ಹೋಲಿಸಿ ಕಠಿಣವಾಗಿ ಖಂಡಿಸಿದ್ದಾನೆ.

ಕತ್ತೆ ಬೂದಿಲಿ ಹೊರಳೆ ಮತ್ತೆ ಯತಿಯಪ್ಪುದೇ
ತತ್ತ್ವವಱಿಯದಲೆ ಭಸಿತವಿಟ್ಟವ ಮುದ್ದು
ಕತ್ತೆಯಂತೆಂದ ಸರ್ವಜ್ಞ॥

ಅತ್ತಿಮರ ತಾ ಕಾಯ ಹೊತ್ತಿರ್ದ ತೆಱದಂತೆ
ತತ್ತ್ವಭೇದವನು ಅಱಿಯದೆಯೆ ರುದ್ರಾಕ್ಷಿ
ಹೊತ್ತು ಫಲವೇನು ಸರ್ವಜ್ಞ॥

ತತ್ತ್ವಜ್ಞಾನದ ಕಡೆಗೆ ಲಕ್ಷ್ಯಕೊಡದೆ ಈ ಬಾಹ್ಯಚಿಹ್ನೆಗಳನ್ನೇ
ದೊಡ್ಡದಾಗಿ ಭಾವಿಸಿಕೊಳ್ಳುವುದು ಕುರಿಯು ಕಬ್ಬಿನ ಸೋ
ಯನ್ನು ತಿನ್ನುವಂತೆ—

ಕುಱಿ ಕಬ್ಬಿನೊಳಹೊಕ್ಕು ಅಱಿವುದೇ ತನಿರಸವ
ಹೊಱಗಣ ಸೋಗೆಯಗಿವಂತೆ ಜ್ಞಾನದ
ಕುಱುಹು ಬೇಱೆಂದ ಸರ್ವಜ್ಞ॥

ಹೀಗೆ ತತ್ತ್ವವನ್ನರಿಯದವನು ನಾಯಿ, ಎತ್ತು, ಕುರಿ ಮುಂತಾ
ಪಶು ಪ್ರಾಣಿಗಳಿಗೆ ಸಮಾನ. ಮನುಷ್ಯನಾದದ್ದಕ್ಕೆ ಜ್ಞಾನಮಾ
ವನ್ನು ಹಿಡಿಯಬೇಕು; ಸಾತ್ತ್ವಿಕನಾಗಿ ಸತ್ಯಾ ಸತ್ಯ ವಿಚಾರಮಾ
ಬೇಕು

ಜ್ಞಾನಿಯಾದವನಿಗೆ ಡಂಭ ಡಬ್ಬಾಳಿಕೆಗಳಿರುವುದಿಲ್ಲ. ಅವ
ವೇಷಭೂಷಣ ನಡೆನುಡಿಗಳು ವಿಲಕ್ಷಣವಾಗಿರಬಹುದು—

ಮುಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದೆದು
ಹಿಂಡನಗಲಿದ ಗಜದಂತೆ ಇಪ್ಪವರ
ಕಂಡು ನಂಬುವುದು ಸರ್ವಜ್ಞ॥

ಹೀಗೆಂದು.

ಮಂಡೆಬೋಳಾದವರ ಕಂಡು ನಂಬಲಿಬೇಡ
ಖಂಡಿತಮಪ್ಪ ಪರತತ್ವ ವಿಷಯವನು
ಕಂಡು ನಂಬುವುದು ಸರ್ವಜ್ಞ॥

ತತ್ವವನ್ನು ಅರಿದರೆ ಇದೊಂದೂ ಬೇಡ—

ನಿತ್ಯನೇಮಗಳೇಕೆ ಮತ್ತೆ ಪೂಜೆಗಳೇಕೆ
ನೆತ್ತಿ ಬೋಳೇಕೆ ಜಡೆಯೇಕೆ ಪವನದಿ
ಸತ್ಯವುಳ್ಳವಗೆ ಸರ್ವಜ್ಞ॥

ಅಂಥವನು ಬ್ರಹ್ಮದ ವಿಚಾರವನ್ನು ಕುರಿತು ಮಾತನಾಡಹೋಗುವುದಿಲ್ಲ. ಬಾಯಿಬಿಟ್ಟರೆ ಬಣ್ಣಗೇಡು.

ಮಾತಿನಾ ಬೊಮ್ಮವೂ ತೂತಾದ ಮಡಕೆಯೂ
ಪಾತಕದ ನೆರೆಯು ಇವು ಮೂರು ಲೋಕದೊ
ಳೇತಕ್ಕು ಬೇಡ ಸರ್ವಜ್ಞ॥

ಬೊಮ್ಮವನು ಅಱಿದಿಹರೆ ಸುಮ್ಮನೇ ಇರಬೇಕು
ಬೊಮ್ಮವನಱಿದು ಉಸುರಿದರೆ ಕಳಹೋಗಿ
ಕೆಮ್ಮಿದಂತಕ್ಕು ಸರ್ವಜ್ಞ॥

ತಾನು ಜ್ಞಾನಿ, ಪಂಡಿತ; ಎಲ್ಲರೂ ತನ್ನಲ್ಲಿಗೆ ಬರಬೇಕು, ಶಿಷ್ಯರಾಗಬೇಕು, ತಾನು ಎಲ್ಲರನ್ನೂ ಉದ್ಧಾರ ಮಾಡುತ್ತೇನೆ ಎಂದು ಅವನು ಕೂಗಿ ಕರೆಯುವುದಿಲ್ಲ, ಪ್ರಕಟನೆಗಳನ್ನು ಹೊರಡಿಸುವುದಿಲ್ಲ—

ಬಲ್ಲೆನೆಂಬುವ ಮಾತು ಎಲ್ಲವೂ ಹುಸಿ ಕಾಣೊ
ಬಲ್ಲರೆ ಬಲ್ಲೆನೆನಬೇಡ ಸುಮ್ಮನಿರ
ಬಲ್ಲವನೆ ಬಲ್ಲ ಸರ್ವಜ್ಞ॥

ತನ್ನ ನೋಡಲಿ ಎಂದು ಕನ್ನಡಿಯು ಕರೆವುದೇ?
ತನ್ನಲ್ಲಿ ಜ್ಞಾನ ಪ್ರದಿಸಿದ ಮಹಾತ್ಮ
ಕನ್ನಡಿಯಂತೆ ಸರ್ವಜ್ಞ॥

ಅವನಿಗೆ ಸರ್ವಸಮತೆ ಇರುತ್ತದೆ—

ಎಂಜಲವು ಹೊಲೆಯಿಲ್ಲ ಸಂಜೆಬೆಳಗುಗಳಿಲ್ಲ
ಅಂಜಿಕೆಯಿಲ್ಲ ಭಯವಿಲ್ಲ ಜ್ಞಾನವೇ
ಬಂಜನವಿರಲು ಸರ್ವಜ್ಞ॥

ಅವನು ಜಾತಿಭೇದ ಮಾಡನು—

ಕೋತಿಗೆ ಗುಣವಿಲ್ಲ ಮಾತಿಗೆ ಕೊನೆಯಿಲ್ಲ
ಸೋತುಹೋದವಗೆ ಸುಖವಿಲ್ಲ; ಅರಿದವಗೆ
ಜಾತಿಯೇ ಇಲ್ಲ ಸರ್ವಜ್ಞ॥

ಅವನಿಗೆ ಯಾರ ಹೆದರಿಕೆಯೂ ಇರುವುದಿಲ್ಲ; ಯಾರ ಬೈಗಳು
ತಟ್ಟುವುದಿಲ್ಲ—

ಆನೆ ನೀರಾಟದಲಿ ಮೀನ ಕಂಡಂಜುವುದೆ?
ಹೀನ ಮಾನವರ ಬಿರುನುಡಿಗೆ ತತ್ವದ
ಜ್ಞಾನಿಯಂಜುವನೆ ಸರ್ವಜ್ಞ॥

ಅವನು ಸಂಸಾರದಲ್ಲಿದ್ದರೂ ಸಂಸಾರಿಯಾಗುವುದಿಲ್ಲ—

ಮುತ್ತು ನೀರೊಳು ಹುಟ್ಟಿ ಮತ್ತೆ ನೀರಪ್ಪುದೇ
ಸತ್ಯವರಿದ ಜ್ಞಾನಿ ಸಂಸಾರವ
ಮತ್ತೆ ಹೊದ್ದುವನೆ? ಸರ್ವಜ್ಞ॥

ಅವನು ಎಂತಿರಲಿ, ಎಲ್ಲಿರಲಿ, ತಪ್ಪುದಾರಿಗೆ ಹೋಗುವುದಿಲ್ಲ—

ನೆತ್ತದಾ ಹಾಸಂಗಿ ಎತ್ತಬಿದ್ದರು ದಾಯ
ತತ್ವದ ನೆಲೆಯನರಿದಾತನೊಲಿದು ತಾ
ನೆತ್ತಿರ್ದಡೇನು ಸರ್ವಜ್ಞ॥

ಜ್ಞಾನಿ ಸಂಸಾರದೊಳು ತಾನಿರಲು ತಿಳಿದಿಹನು
ಭಾನು ಮೋಡದಲಿ ಹೊಳವಂತೆ ಸದಮಲ
ಸ್ಥಾನದೊಳಿಹನು ಸರ್ವಜ್ಞ॥

೫. ಶಮದಮಾದಿ ಸಂಪತ್ತಿ

ಹೀಗೆ ನಿಜವಾದ ಭಕ್ತಿಯೂ ಆ ಮೂಲಕ ಜ್ಞಾನವೂ ಬರಬೇಕಾದರೆ ಮನುಷ್ಯನು ಶುದ್ಧಜೀವಿಯಾಗಬೇಕು. ಕಾಮಕ್ರೋಧಾದಿಗಳನ್ನು ಬಿಡಬೇಕು.

ಕೋಪವೆಂಬುದು, ಕೇಳಿ, ಪಾಪದ ನೆಲೆಗಟ್ಟು
ಕೂಪದೊಳು ನೀರು ಹಜಿಡಂತೆ ನರಕದಿ
ಕೋಪಿ ತಾನಿಳಿವ ಸರ್ವಜ್ಞ॥

ಕೋಪದಿಂದ ತುಂಬಿದವನ ದೇಹ ಹಾವು ಅಡಗಿಕೊಂಡಿರುವ ಹುತ್ತದ ಹಾಗೆ: ಅವನ ಬಾಯಿಂದ ನಾಲಗೆಯು ವಿಷದ ಮಾತುಗಳನ್ನು ಸುರಿಸುತ್ತದೆ. ಅಂಥ ಸಮಯದಲ್ಲಿ ಸಮಸ್ಥಿತಿಯನ್ನು ಪಡೆಯಲು ಅಭ್ಯಾಸ ಮಾಡಬೇಕು.

ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ
ಕಡುರೋಷವೆಂಬ ವಿಷವೇಱೆ ಸಮತೆ ಗಾ
ರುಡಿಗನಂತಕ್ಕು ಸರ್ವಜ್ಞ॥

ಹಸಿವ ಕೊಂದಾತಂಗೆ ಪಶುವಧೆಯ ಮಾಡದಗೆ,
ಹುಸಿ ಕರ್ಮ ಕಾಮವಳಿದವಗೆ ಇಹಪರದಿ
ಶಶಿಧರನೊಲಿವ ಸರ್ವಜ್ಞ॥

ಆದರೆ ಇವನ್ನು ಗೆಲ್ಲುವುದು ಕಷ್ಟ; ದೇಹವನ್ನು ದಂಡಿಸಿದರೆ ಇವು ತಗ್ಗುವುದಿಲ್ಲ.

ಒಡಲ ದಂಡಿಸಿ ಮುಕ್ತಿ ಪಡೆವೆನೆಂಬವ ಹೆಡ್ಡ
ಒಡಿಗೆಯುಲಿ ಹುತ್ತಹೊಡೆಯಲಡಗಿಹ ಸರ್ಪ
ಮಡಿಯುವುದೆ ಹೇಳು ಸರ್ವಜ್ಞ॥

ವೇದ, ಶಾಸ್ತ್ರ ಮುಂತಾದವುಗಳನ್ನೆಲ್ಲಾ ಓದುವುದರ ಉದ್ದೇಶವೇ ಇದು: ಕಾಮಕ್ರೋಧಗಳನ್ನು ತ್ಯಜಿಸಿ ಮನಶ್ಶಾಂತಿ ಪಡೆಯುವುದು—

ವೇದಶಾಸ್ತ್ರಾಗಮವನೋದಿದೊಡೆ ಫಲವೇನು
ವೇದಿಸುವ ಚಿತ್ತ ಸಮರಸವಿಲ್ಲದೊಡೆ
ಬೂದಿಯಲಿ ಹೋಮ ಸರ್ವಜ್ಞ॥

ಆದ್ದರಿಂದ ವೇದಾಂತ ಓದಿ, ಸಂನ್ಯಾಸ ಪಡೆದು, ಮನೆಮ ಗಳನ್ನು ತೊರೆದು ಹೊರಟು ಹೋಗುವವನಿಗಿಂತಲೂ, ಕಾ ಕ್ರೋಧಗಳನ್ನು ಬಿಟ್ಟು ಸಂಯಮ ಪಡೆದವನೇ ಹೆಚ್ಚಿನವನಾ ತ್ತಾನೆ.

ಓದಿ ಬೂದಿಯ ಪೂಸಿ ತೇದು ಕಾವಿಯ ಹೊದೆದು
ಹೋದಾತ ಯೋಗಿಯೆನಬೇಡ: ಇಂದ್ರಿಯವ
ಕಾದಾತ ಯೋಗಿ. ಸರ್ವಜ್ಞ॥

೬. ವಿಧಿ-ಕರ್ಮ

ಮನುಷ್ಯನು ದುರಹಂಕಾರಪಡಬಾರದು; ತನಗಿಂತ ಮಿಗಿ ಶಕ್ತಿ ಮತ್ತೊಂದು ಇದೆ ಎಂಬುದನ್ನು ಅರಿತು ವಿನಯದಿಂ ನಡೆಯಬೇಕು. ಏಕೆಂದರೆ ಎಂಥೆಂಥ ಶೂರರೋ, ದೇವಾಧಿದೇವ ಗಳೋ, ತಮ್ಮ ಮನಸ್ಸಿಗೆ ಬಂದಂತೆ ನಡೆಯಲಾಗಲಿಲ್ಲ. ರಾಮಾ ಯಣ, ಭಾರತ, ಪುರಾಣ, ಪುಣ್ಯಕಥೆ, ಇವುಗಳಿಂದ ಇದು ಸ್ಪ ವಾಗುತ್ತದೆ—

ಪ್ರತಿಯಿಲ್ಲದನಂಗಜನು ಒಡಿವಡೆದ ಹನುಮಂತ
ಪೃಥವಿಗೀಶ್ವರನು ತಿರಿದುಂಡನುಳಿದವರ
ಸಡಗರವೇನು? ಸರ್ವಜ್ಞ॥

ಪಿತಾ ತನರ್ಜುನನು ಮುತ್ತಯ್ಯ ದೇವೇಂದ್ರ
ಮತ್ತೆ ಮಾತುಲನು ಹರಿಯಿರಲಭಿಮನ್ಯು
ಸತ್ತನೇಕಯ್ಯ ಸರ್ವಜ್ಞ॥

ವಿಧಿಯ ವಿಲಾಸವು ಯಾರಿಗೂ ತಿಳಿಯದು. ಒಳ್ಳೆಯದು ಬರುವಾಗಲೂ ಹಾಗೆಯೇ; ಕೆಟ್ಟದು ಬರುವಾಗಲೂ ಹಾಗೆಯೇ—

ಏನಾನು ನೆವದಿಂದ ತಾನೆ ಬಪ್ಪುದು ಸಿರಿಯು
ಕಾನನದೊಳಗೆ ಕರಿ ಹುಟ್ಟಿ ಪಟ್ಟಕ್ಕೆ
ತಾನೆ ಬಂದಂತೆ ಸರ್ವಜ್ಞ॥

ಏನಾನು ನೆವದಲಿ ತಾನೆ ಪೋಪುದು ಸಿರಿಯು
ಕಾನನದೊಳಗೆ ಕಿಡಿ ಹುಟ್ಟಿ ಕಾಡೆಲ್ಲ
ತಾನೆ ಬೆಂದಂತೆ ಸರ್ವಜ್ಞ॥

ಅದೃಷ್ಟವು ಅನುಕೂಲವಾಗಿದ್ದಾಗ ಮುಟ್ಟಿದ್ದೆಲ್ಲ ಹೊನ್ನಾಗುತ್ತದೆ; ಆಗ, ನಾನು ಮಾಡಿದೆ, ನನ್ನ ಸಮಾನವಿಲ್ಲ ಎಂದುಕೊಳ್ಳುತ್ತೇವೆ—

ಮೂಱಿಟ್ಟ ರಾಜಕ್ಕು ಆಱು ಹನ್ನೆರಡಕ್ಕು
ಮೀಱುವ ಗೊಡ್ಡು ದೈವಕ್ಕು ಕರ್ಮ ತಾ
ಹಾಱುವಾ ದಿನಕೆ ಸರ್ವಜ್ಞ॥

ಇಂಗು ಕರ್ಪೂರವಕ್ಕು ಬಂಗು ಬಪ್ಪುರವಕ್ಕು
ಅಂಗಳದ ಸಿರಿಯು ಹೊನ್ನಕ್ಕು ಕರ್ಮವು
ಹಿಂಗುವಾ ದಿನಕೆ ಸರ್ವಜ್ಞ॥

ದೈವವು ಪ್ರತಿಕೂಲವಾದರೆ ಮುಟ್ಟಿದ್ದೆಲ್ಲಾ ಮಣ್ಣಾಗುವುದು; ನಮ್ಮ ಅಸಹಾಯತೆ ಗೋಚರವಾಗುವುದು; ದೇವರನ್ನು ಬಯ್ಯುವೆವು—

ಎಂಟೆಟ್ಟಿರೆರಡಕ್ಕು ನೆಂಟರೂ ಹಗೆಯಕ್ಕು
ದಂಟುಗಳಿದ್ದು ಹಾವಕ್ಕು ಕರ್ಮ ತಾ
ನಂಟುವಾ ದಿನಕೆ ಸರ್ವಜ್ಞ॥

ಅದನ್ನು ನಾವು ವಿಚಾರಿಸುವಂತಿಲ್ಲ, ಮರೆಸುವಂತಿಲ್ಲ, ಮೋಸಪಡಿಸುವಂತಿಲ್ಲ; ಅದು ನಾವು ಇರುವ ಕಡೆಗೇ ಹುಡುಕಿಕೊಂಡು

ಬರುತ್ತದೆ. ಬೇಡವೆಂದರೂ ಬಿಡದೆ ತನ್ನ ಕೆಲಸ ಮಾಡಿ ಹೋಗುತ್ತದೆ—

ಆಡುವಾ ಮಕ್ಕಳಿಗೆ ಊಡುವಾ ತಾಯಂತೆ
ಮಾಡಿದ ಕರ್ಮ ಬಳಿವಿಡಿದು, ಪಿಡಿದಂತು
ಊಡುತ್ತಲಿಹುದು, ಸರ್ವಜ್ಞ॥

ದೈವವು ನಮ್ಮ ಕರ್ಮಾಧೀನ; ಆದ್ದರಿಂದ ದೈವ ಒದಗಿಸಿದ ನಮ್ಮ ಕರ್ಮಫಲವನ್ನು ನಾವು ತಾಳ್ಮೆಯಿಂದ ಅನುಭವಿಸಬೇಕು; ಸನ್ಮಾರ್ಗದಲ್ಲಿ ನಡೆಯುತ್ತ ಹೋಗಬೇಕು—

ಅಂತಿಕ್ಕು ಇಂತಿಕ್ಕು ಎಂತಿಕ್ಕು ಎನಬೇಡ
ಚಿಂತಿಸಿ ದೇಹ ಬಡವಕ್ಕು; ಶಿವ ತೋಱಿ
ದಂತಿಹುದೆ ಲೇಸು ಸರ್ವಜ್ಞ॥

೭. ಧರ್ಮ-ಮತಗಳು

ಸರ್ವಜ್ಞನಿಗೆ ಅವರು ಇವರು ಎಂಬ ಭೇದವಿಲ್ಲ: ನಿಷ್ಕಾರಣವಾದ ದ್ವೇಷವಾಗಲಿ ಅಭಿಮಾನವಾಗಲಿ ಇಲ್ಲ; ಅವನು ಮೆಚ್ಚುವುದು ಗುಣ. ದ್ವೇಷಿಸುವುದು ದೋಷ. ಆದ್ದರಿಂದ ವೀರಶೈವರೆಂದು ಅವರ ಹುಳುಕನ್ನು ಮುಚ್ಚಿಲ್ಲ. ಅನ್ಯಮತೀಯರೆಂದು ಜೈನರ, ಬ್ರಾಹ್ಮಣರ ಗುಣಗಳನ್ನು ಕಡೆಗಣಿಸಿಲ್ಲ. ನಿಜವಾದ ನೀತಿಬೋಧಕನ ದೃಷ್ಟಿಯೇ ಇದು. ದಾರಿಯೇ ಇದು. ಸದಾಚಾರ ಸತ್ಪ್ರವೃತ್ತಿಗಳಿಲ್ಲದವರು ಬರಿಯ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದ್ದರಿಂದಲೇ ಹೇಗೆ ಭಕ್ತರಾಗುವುದಿಲ್ಲವೆಂಬುದನ್ನು ಅನೇಕ ಕಡೆ ಅನೇಕ ವಿಧವಾಗಿ ಹೇಳಿದ್ದಾನೆ. ಅವನದು ಒಂದೆ ನೋ

ದ್ದೇವೆ. ಹೀಗೆ ಜೈನರನ್ನೂ, ಬ್ರಾಹ್ಮಣರನ್ನೂ ಅವರ ಲೋಪ ದೋಷಗಳನ್ನು ಹಿಡಿದು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ಜೊತೆಗೆ ಅವರ ಗುಣಗಳನ್ನೂ ನಿಷ್ಪಕ್ಷಪಾತವಾಗಿ ಬಾಯಿತುಂಬ ಹೊಗಳಿದ್ದಾನೆ.

ಮಾತನರಿಯದಾ ಸುತನು ನೀತಿಯರಿಯದಾ ಸತಿಯು
ನೀತಿಯನ್ನರಿಯದ ವಿಪ್ರನು ಜಗದೊಳು
ಜೋತಿಯಿದ್ದಂತೆ ಸರ್ವಜ್ಞ॥

ಧರ್ಮದ ತಿರುಳು ವೇದ ಓದುವುದಲ್ಲ, ಮತಾಚರಣೆ ಸಂಪ್ರದಾಯಾನುವರ್ತನೆಗಳಲ್ಲ: ಅನುಕಂಪೆ, ಅಹಿಂಸೆ. ಇವೇ ಉತ್ತಮರ ಗುರುತು—

ಉತ್ತಮದ ವರ್ಣಗಳನುತ್ತಮರೆನಬೇಡ
ಮತ್ತೆ ತನ್ನಂತೆ ಬಗೆವರನೆಲ್ಲರ
ನುತ್ತಮರೆನ್ನು ಸರ್ವಜ್ಞ॥

ಪ್ರಾಣಿಹಿಂಸೆಯಾಗುವ ಯಜ್ಞಯಾಗಾದಿಗಳನ್ನೂ ಅವನ್ನು ಮಾಡುವ ವಿಪ್ರರನ್ನೂ ಅವನಿಗೆ ಕಂಡರಾಗದು. ಪ್ರಾಣಿಗಳನ್ನು ಕೊಂದು ಮಾಡುವ ಭಕ್ತಿ ಎಂಥ ಭಕ್ತಿ?

ಕೊಂದು ಮಾಡುವ ಭಕ್ತಿಯಿಂದವನು ಆನೊರೆವೆ
ಗಂಧದ ಮರನ ನೆರೆ ಸುಟ್ಟು ಇದ್ದಲನು
ತಂದು ಬಡಿದಂತೆ ಸರ್ವಜ್ಞ॥

ಪ್ರಾಣಿಹಿಂಸೆ ಮಾಡುವವನು ಹೊಲೆಯನಿಗಿಂತ ಕಡೆ

ಸತ್ತುದನು ತಿಂಬಾತ ಮತ್ತದರ ಹೊಲೆಯನು
ಒತ್ತಿ ಜೀವವನು ಕೊಯ್ಕೊಯ್ದು ತಿಂಬಾತ
ನುತ್ತಮದ ಹೊಲೆಯ ಸರ್ವಜ್ಞ॥

ಯಜ್ಞದಲ್ಲಿ ಪಶುವನ್ನು ಹೀಗೆ ಕೊಲ್ಲುತ್ತಾರೆಂಬುವನ್ನು ಒಪ್ಪಿ ದಂಗೆ ಈ ಮಾತು ಕಠಿಣವಾಗಿ ಕಾಣುವುದಿಲ್ಲ. ಜೈನರಲ್ಲಿ ಹಾಗೆ

ಹಿಂಸೆಯು ನಿಷಿದ್ಧ; ಅಹಿಂಸೆಯೇ ಅವರಿಗೆ ಪರಮಧರ್ಮ; ಅದ
ರಿಂದ ಅವನಿಗೆ ಜೈನ ಧರ್ಮದಲ್ಲಿ ಪೂಜ್ಯತೆ—

ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕು! ಆ
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯಮೇಲಿರಲಿ ಸರ್ವಜ್ಞ॥

ಮನುಷ್ಯನ ಕೀಳು ಮೇಲುಗಳು, ಆ ಜಾತಿ ಈ ಜಾತಿ, ಅ
ಧರ್ಮ, ಈ ಧರ್ಮ ಎಂಬವುಗಳ ಮೇಲೆ ನಿಷ್ಕರ್ಷೆಯಾಗತಕ್ಕವು
ಗಳಲ್ಲ. ಯಾರು ತನ್ನ ಆತ್ಮಗುಣಗಳಿಂದ ದೇವರಿಗೆ ಮೆಚ್ಚುಗೆ
ಯಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಾನೋ ಅವನೇ ಮೇಲು;
ಅವನೇ ಜಾತಿವಂತ—

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ
ಜಾತಿವಿಜಾತಿಯೆನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ॥

ಆಳ್ವಾರುಗಳಲ್ಲಿಯೂ ನಾಯನಾರುಗಳಲ್ಲಿಯೂ ಎಷ್ಟೋ ಜನ
ಕೀಳು ಜಾತಿಯಲ್ಲಿ ಹುಟ್ಟಿ ಮುಕ್ತಿ ಹೊಂದಲಿಲ್ಲವೇ? ಕುಲ ಭೇದ
ವನ್ನು ನೋಡುವವರು ಮನುಷ್ಯರು; ದೇವರು ಅದನ್ನು ನೋಡು
ವುದಿಲ್ಲ: ಅವನು ನೋಡುವುದು ಶುದ್ಧ ಸತ್ವವನ್ನು—

ಎಲುವಿಲ್ಲ ನಾಲಗೆಗೆ ಬಲವಿಲ್ಲ ಬಡವಂಗೆ
ತೊಲೆಕಂಬವಿಲ್ಲ ಗಗನಕ್ಕೆ: ದೇವರಲಿ
ಕುಲಭೇದವಿಲ್ಲ ಸರ್ವಜ್ಞ॥

೮. ಸಜ್ಜನರು-ದುರ್ಜನರು : ಅವರ ಸಹವಾಸ

ಮನುಷ್ಯರು ಅವರವರ ಪೂರ್ವಕರ್ಮಾನುಸಾರವಾಗಿ ಈ ಜನ್ಮದಲ್ಲಿ ಬೇರೆ ಬೇರೆ ಗುಣಾವಗುಣಗಳೊಂದಿಗೆ ಹುಟ್ಟುವರು. ವಿವೇಕಿಗಳು ವಿದ್ಯಾವಂತರು ತಮ್ಮ ಗುಣದೋಷಗಳನ್ನು ತಾವು ಅರಿತು ಉತ್ತಮವಾಗುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕು. ಇದಕ್ಕೆ ಸತ್ಸಹವಾಸವು ಬಹು ಸಹಾಯಮಾಡುತ್ತದೆ. ಸಜ್ಜನರ ನಡೆ ನುಡಿ ಸ್ನೇಹಗಳಿಂದ ಮನುಷ್ಯನು ಪರಿಶುದ್ಧನಾಗುತ್ತಾನೆ; ತೀರ್ಥಯಾತ್ರೆಗಳನ್ನು ಮಾಡಿದ್ದಕ್ಕಿಂತ ಹೆಚ್ಚಿನ ಫಲ ಸತ್ಸಂಗದಿಂದ ಬರುತ್ತದೆ—

ಸತ್ಯರಾ ನುಡಿ ತೀರ್ಥ ಸತ್ಯರಾ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವ ನೀ
ರೆತ್ತಣದು ತೀರ್ಥ ಸರ್ವಜ್ಞ॥

ಕೆಟ್ಟವರ ಜೊತೆ ಸೇರಿದರೆ ಅವರಂತೆ ಆಗುವುದು ಸ್ವಭಾವ:

ಒಳ್ಳಿದರ ಒಡನಾಡಿ ಕಳ್ಳನೊಳ್ಳಿದನಕ್ಕು
ಒಳ್ಳಿದ ಕಳ್ಳರೊಡನಾಡಿ ಅವ ಶುದ್ಧ
ಕಳ್ಳ ತಾನಕ್ಕು ಸರ್ವಜ್ಞ॥

ಆದ್ದರಿಂದ ದುರ್ಜನರ ಸಹವಾಸವನ್ನು ಬಿಡಬೇಕು.

ನೀಚರಾ ನೆರೆಯಿಂದ ಈಚಲದ ಮರ ಲೇಸು
ಈಚಲೊಂದೆಡೆಗೆ ಉಪಕಾರಿ; ನೀಚನು
ಈಚಲಿಂ ಕಷ್ಟ ಸರ್ವಜ್ಞ॥

ಈಚಲು ಮುಳ್ಳುಗಿಡ: ಅದರ ಮುಳ್ಳು ವಿಷ; ಅದರ ಹತ್ತಿರ ಇದ್ದರೆ ಮಾನಗೇಡು—ಹೀಗಿದ್ದರೂ ಅದರಲ್ಲಿ ಗುಣವಿದೆ. ಅದರಿಂದ ಉಪಕಾರವಾಗುತ್ತದೆ. ನೀಚರಿಂದ ಪ್ರಾಣಹಾನಿ ಮಾನಹಾನಿ ಎಲ್ಲಾ ಆಗುತ್ತದೆ. ಉಪಕಾರವೊಂದೂ ಇಲ್ಲ.

ಅವರು ನೋಡುವುದಕ್ಕೆ ಬಹಳ ಸೌಮ್ಯವಾಗಿರುತ್ತಾರೆ ಸುಂದರವಾಗಿರುತ್ತಾರೆ. ಆದರೆ ಒಳಗೆ ವಿಷ—

ಕೆಂಪು ಫಲದೊಳಗೆಲ್ಲ ಕೆಂಪು ಮೆಕ್ಕೆಯ ಹಣ್ಣು
ಕೆಂಪುಂಟು ಒಳಗೆ ವಿಷವುಂಟು; ದುರ್ಜನರ
ಇಂಪು ಇಂತೆಂದ ಸರ್ವಜ್ಞ॥

ಅದರೂ ಮನುಷ್ಯರು ನೊಣಗಳಂತೆ; ಒಳ್ಳೆಯದನ್ನು ಕಂಡರೆ ಬೇಸರ: ಕೆಟ್ಟದ್ದನ್ನು ಕಂಡರೆ ಮನಸ್ಸು ಆ ಕಡೆಗೆ ತಾನಾಗಿ ಎಳೆಯು ತ್ತದೆ—

ಗಂಧವನು ತೀವಲ್ಲಿ ಒಂದು ನೊಣವನು ಕಾಣೆ
ಸಂಧಿಸಿ ಮಲವ ಬಿಡುವಲ್ಲಿ ನೊಣ ಮುತ್ತು
ವಂದವನು ನೋಡು ಸರ್ವಜ್ಞ॥

ದೇವರು ಲೋಕದಲ್ಲಿ ಸಜ್ಜನರನ್ನು ಸೃಷ್ಟಿಸಿದ ಹಾಗೆಯೇ ದುರ್ಜನರನ್ನೂ ಸೃಷ್ಟಿಸಿದ್ದಾನೆ—ಮುಳ್ಳುಕಲ್ಲುಗಳಿದ್ದ ಹಾಗೆ ಅವರನ್ನು ಬೈದರೆ ಏನು ಪ್ರಯೋಜನ? ಬೈದರೆ ಅವರು ನಮ್ಮನ್ನು ಬಿಟ್ಟು ಹೋಗುವುದಿಲ್ಲ. ಆದ್ದರಿಂದ ನಾವು ಎಚ್ಚರದಿಂದ ಉಪಾಯದಿಂದ ನಡೆದುಕೊಳ್ಳಬೇಕು—

ದಂತಪಂಕ್ತಿಯ ನಡುವೆ ಎಂತಿರ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ ಸಜ್ಜನನು
ಇಂತಿರ್ಪ ನೋಡು ಸರ್ವಜ್ಞ॥

ಸಜ್ಜನರು ಮೇಲೆ ನೋಡುವುದಕ್ಕೆ ಹೇಗೆಹೇಗೋ ಇರಬಹುದು ರೂಪಿನಲ್ಲಿ, ವೇಷಭೂಷಣಗಳಲ್ಲಿ, ವಕ್ರವಕ್ರವಾಗಿರಬಹುದು ಆದರೇನು. ಅವರ ಒಳಗು ಒಳ್ಳೆಯದು: ಬಾಳೆಯ ಹಣ್ಣು ಡೊಂಕಾದರೆ ಅದರ ಸವಿ ಡೊಂಕೇ? ದುರ್ಜನರು ಕಜ್ಜಿಯ ಹಾಗೆ ಮೊದಮೊದಲು ಅದರ ಕೆರೆತ ಹಿತವಾಗಿರುತ್ತದೆ. ಆಮೇಲೆ ಬದುಕೇ ವಿಕಾರವಾಗುತ್ತದೆ.

೯. ತ್ಯಾಗಬುದ್ಧಿ

ಗುರುಕರುಣದಿಂದಲೋ ಸತ್ಸಹವಾಸದಿಂದಲೋ ಸಾತ್ವಿಕ ಸ್ವಭಾವದಿಂದಲೋ ಕಾಮಕ್ರೋಧಗಳು ಕಡಿಮೆಯಾಗುತ್ತ ಹೋದರೆ, ಮನುಷ್ಯನಲ್ಲಿ ಲೋಕಕಾರುಣ್ಯ ಹುಟ್ಟುತ್ತದೆ. ಸ್ವಾರ್ಥ ಕಡಿಮೆಯಾಗುತ್ತದೆ. ಇದಕ್ಕೆ ಹೆಗ್ಗುರುತು ತ್ಯಾಗಬುದ್ಧಿ, ದಾನ. ಇದು ಹಿಂದೆ ಎಷ್ಟು ಮುಖ್ಯವಾಗಿ ಎಣಿಸಲ್ಪಟ್ಟಿತ್ತೆಂದರೆ, ಈಗ ದಾನ ಧರ್ಮ ಎಂಬ ಮಾತುಗಳಿಗೂ ಒಂದೇ ಅರ್ಥವಾಗಿಬಿಟ್ಟಿದೆ. ಧರ್ಮದ ಸಾರಸರ್ವಸ್ವ, ತಿರುಳು, ದಾನದಲ್ಲಿದೆ. ದಾನವು ಭಕ್ತಿ ಜ್ಞಾನ ವೈರಾಗ್ಯಗಳಿಗೆ ಸಾಧಕವೂ ಹೌದು, ಸೂಚಕವೂ ಹೌದು. ಲೌಕಿಕವಾಗಿ ನೋಡಿದರೂ, ಸಾಮಾಜಿಕ ರೋಗರುಜಿನಗಳಿಗೆ ದಾನ ಕ್ಕಿಂತ ಬೇರೆ ಮದ್ದು ಉಂಟೆ? ಎಲ್ಲರೂ ದಯಾಮಯರಾಗಿ, ದಾನಶೀಲರಾಗಿ, ಪರೋಪಕಾರ ಮಾಡುತ್ತ ಹೊರಟರೆ, ಅನ್ಯಾಯ ಅಪಚಾರ ಹೊಟ್ಟೆಕಿಚ್ಚು ಮೋಸ ಮುಂತಾದ ಬೇಗೆಗಳು ಹೇಗೆ ಇದ್ದಾವು? ಅದಿರಲಿ; ದಾನ ಮಾಡಬೇಕೆಂಬ ಬುದ್ಧಿ ಬರುವುದೂ ದೊಡ್ಡದು; ದಾನಿಯಲ್ಲಿ ದೇವರ ಅಂಶವಿರಬೇಕು. ಅರಸನು ದೇವರಲ್ಲದಿಲ್ಲ ಎಂಬಂತೆ ದಾನಿಯೂ ದೇವರಲ್ಲದಿಲ್ಲ; ಭಗವಂತನು ದಯಾಸಾಗರ; ಆ ದಯೆಯ ಒಂದು ತೊಟ್ಟು ಹೃದಯದಲ್ಲಿಲ್ಲದೆ ದಾನಿಯಾಗುವುದು ಹೇಗೆ? ಅವನು ಎಲ್ಲರಂತಲ್ಲ—

ಇಕ್ಕುವವನೂರಿಗೊಂದೊಕ್ಕಲುಂದೆನಬೇಡ
ಅಕ್ಷಯಪದವ ಪಡೆದು ಕೈಲಾಸದಿ
ದೊಕ್ಕಲಿರಬಂದ ಸರ್ವಜ್ಞ॥

ದೊರೆತನವ ಮಾಡುವರು ಕರೆದನ್ನ ನೀಡುವರು
ಉರಗಭೂಷಣನ ನೆನೆವರು ಧರೆಯೊಳಗೆ
ನರರಲ್ಲ ನೋಡು ಸರ್ವಜ್ಞ॥

ಆವನು ದೇವರೇ ಎಂದರೂ ಎನ್ನಬಹುದು—

ಈವಂಗೆ ದೇವಂಗೆ ಆವುದಂತರವಯ್ಯ
ದೇವನು ಜಗಕೆ ಕೊಡುವನು ಕೈಯಾರೆ
ಈವನೇ ದೇವ ಸರ್ವಜ್ಞ॥

ಕೊಡುವಾತನೇ ಹರನು ಪಡೆವಾತನೇ ನರನು". ದೇವರ
ಕೊಟ್ಟಾಗ, ತಾನೂ ತಿಂದು ಇತರರಿಗೂ ಕೊಡುವುದು ವಿವೇಕ—

ಹುಟ್ಟುವಾಗೀ ಧನವ ಮೊಟ್ಟೆಗಟ್ಟೀದನೇ?
ಕಟ್ಟಕಡೆಯಲ್ಲಿ ಕೊಂಡೊಯ್ಯಸಿದನಿಂದು
ಕೊಟ್ಟುಂಬ ದಾನಿ ಸರ್ವಜ್ಞ॥

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಂಗೆ
ಕೊಟ್ಟದ್ದು ಕೆಟ್ಟತೆನಬೇಡ ಮುಂದಕೆ
ಕಟ್ಟಿಹುದು ಬುತ್ತಿ ಸರ್ವಜ್ಞ॥

ದಾನಮಾಡಿದರೆ "ಶಿವನಲ್ಲಿ ಕಟ್ಟಿಹುದು ಬುತ್ತಿ". ಹೀಗ
ತನಗೆ ಪರಲೋಕದಲ್ಲಿ ಬರುವ ಸದ್ಗತಿಯಿರಲಿ; ಇಹಲೋಕದ
ತಾನು ಮತ್ತೊಬ್ಬರನ್ನು ನೋಡಿ ಅಯ್ಯೋ ಎಂದರೆ ತನ್ನನೂ
ಇತರರು ನೋಡಿ ಅಯ್ಯೋ ಎನ್ನುವರು.

ದಾನಮಾಡುವವನು ಪಾತ್ರ ಕಾಲ ದೇಶಗಳನ್ನು ಅರಿತು ದಾ
ಮಾಡಬೇಕು. ಹಾಗಾದರೆ ಅದಕ್ಕೆ ಹೆಚ್ಚಿನ ಬೆಲೆ—

ಇಚ್ಛೆಯನು ಅಱಿದಿತ್ತ ನುಚ್ಚೊಂದು ಮಾಣಿಕವು
ಇಚ್ಛೆಯು ತೀರ್ದ ಬಳಿಕಿತ್ತ ಮಾಣಿಕವು
ನುಚ್ಚಿನಿಂದತ್ತ ಸರ್ವಜ್ಞ॥

ಆಗ ಬಾ ಈಗ ಬಾ ಹೋಗಿ ಬಾ ಎನ್ನದೇ
ಆಗಲೇ ಕರೆದು ಕೊಡುವನ ಧರ್ಮ ಹೊ
ನ್ನಾಗದೇ ಬಿಡದು ಸರ್ವಜ್ಞ॥

ಯಾರಿಗೆ ಆಸೆಯಿದೆಯೋ ಅವನೇ ಬಡವ; ಯಾರು ಮತ್ತೊಬ್ಬನ ಬಾಗಿಲಿಗೆ ಬಂದು ಬೇಡುತ್ತಾನೆಯೋ ಅವನೇ ದೀನ; ದಾನಶೀಲನಾದವನು. ಬಡವ ಭಾಗ್ಯವಂತ ಎಂಬ ವಿವೇಚನೆಯನ್ನೇ ಮಾಡುವುದಿಲ್ಲ—

ಮೇಲು ಕೀಳೆನಬೇಡ ಶೀಲವನು ಬಿಡಬೇಡ
ಕಾಲವಕಾಲವೆನಬೇಡ ಧರ್ಮದಾ
ಕೀಲ ಬೇರೆಂದ ಸರ್ವಜ್ಞ

ಕೊಡುವವನ ಕೈ ಹಿಡಿಯುವವರಾರು?

ಕೊಡುವವನ ಧರ್ಮಕ್ಕೆ ಕಡೆಯೇನು ಮೊದಲೇನು?
ಎಡತಾಕಿಸಿಕೊಂಡು ಕೊಡುವನ ಧರ್ಮವು
ಮಡಿಯು ಮಣ್ಣೆಂದ ಸರ್ವಜ್ಞ॥

ನಿಜವಾಗಿ ನೋಡಿದರೆ, ದಾನಮಾಡುವವರು ಅತಿಯಾಗಿ ದಾನ ಮಾಡಬೇಕಾದದ್ದಿಲ್ಲ—

ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೇ?
ಕೊಡಬೇಡ ಕೊಡದೆ ಇರಬೇಡ ಧರ್ಮವ
ಬಿಡಬೇಡವೆಂದ ಸರ್ವಜ್ಞ॥

ಅಷ್ಟು ಕೊಡಲಿ, ಇಷ್ಟು ಕೊಡಲಿ. ಎಷ್ಟಾದರೂ ಕೊಡಲಿ; ಕೊಟ್ಟದ್ದನ್ನು

ಆಡದೇ ಕೊಡುವವನು ರೂಢಿಯೊಳಗುತ್ತಮನು
ಆಡಿಕೊಡುವವನು ಮಧ್ಯಮನಧಮ ತಾ
ನಾಡಿ ಕೊಡದವನು ಸರ್ವಜ್ಞ॥

ದಾನಮಾಡುವವನಿಗೆ ತಾನು ಬಡವರ ಉದ್ಧಾರಿ ಎಂಬ ಅಹಂಕಾರವಾಗಲಿ, ಇವರು ತನ್ನವರು ಹೆರವರು ಹಿರಿಯರು ಕಿರಿಯರು ಎಂಬ ಪಕ್ಷಪಾತವಾಗಲಿ, ತಾನು ಕೊಟ್ಟು ಕೆಟ್ಟೆನೆಂಬ ಪಶ್ಚಾತ್ತಾಪ

ವಾಗಲಿ ಇರಬಾರದು; ಪ್ರತಿಫಲಾಪೇಕ್ಷೆ ಇರಬಾರದು. ಹಾಗಾದರೆ ಆ ದಾನ ಶ್ರೇಷ್ಠವಾಗುತ್ತದೆ—

ಅಱಿಯದೀಯುವ ದಾನ ತೆಱೆದು ನೋಡದ ಕಣ್ಣು
ತಿರುಗಿ ಬಯಸದನ ಶಿವಪೂಜೆ ಶಿವನಿಂದ
ಹಿರಿದೆಂದು ಅಱಿಗು ಸರ್ವಜ್ಞ॥

ದಾನಗಲ್ಲದೆ ಲೋಭಿಯಾದವನಿಗೆ ಇಹವೂ ಇಲ್ಲ, ಪರವೂ ಇಲ್ಲ—

ಉಣ್ಣದೊಡವೆಯು ಗಳಿಸಿ ಮಣ್ಣಿನೊಳು ತಾನಿರಿಸಿ
ಸಣ್ಣಿಸಿ ನೆಲನ ಸಾರಿದನ ಬಾಯೊಳಗೆ
ಮಣ್ಣು ಕಾಣಯ್ಯ ಸರ್ವಜ್ಞ॥

ಅವನ ಜನ್ಮ ಉಣ್ಣೆಯ ಜನ್ಮಕ್ಕಿಂತ ಕೀಳು. ಏಕೆಂದರೆ—

ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
ಪುಣ್ಯವ ಮಾಡಿ ಉಣಲೊಲ್ಲದವನಿರವು
ಉಣ್ಣೆಯಿಂ ಕಷ್ಟ ಸರ್ವಜ್ಞ॥

ಅವನ ಊಟ ನಾಯಿಯ ಊಟ!

ವಿನಯವಿದ್ದಧಿಕರನು ತನುಗೆಟ್ಟ ಬಡವರನು
ಘನಹೀನವಳಿದು ಕರೆದುಣ್ಣದವನೂಟ
ಶುನಕ ತಿಂದಂತೆ ಸರ್ವಜ್ಞ॥

ಅವನು ಬದುಕಿದ್ದರೂ ಸತ್ತಂತೆಯೇ: ಸತ್ತವನು ಎಷ್ಟೋ ವಾಸಿ—

ಹೊತ್ತಾರೆ ಬಯ್ಗಿಂಗೆ ಮತ್ತೆ ಬಾ ಎಂದೆನುತ
ಪೊತ್ತನೆ ಕೊಂದು ಹುಸಿವವನಾಗಿಂತಲು
ಸತ್ತಾತ ಲೇಸು ಸರ್ವಜ್ಞ॥

ಇವರ ಸ್ವಭಾವ "ಹುಟ್ಟಿಯು ಒಳಗೆ ಜೇನಿಕ್ಕಿ ಪರರಿಂಗೆ ಕೊಟ್ಟು ಹೋದಂತೆ". ದಾನವೆಂದರೆ ತಲೆನೋವು, ಹಾದ ಹಾಕಿದರೆ ಏನಾದರೂ ಬಾಯಿಮುಚ್ಚಿಕೊಂಡು ಕೊಡುತ್ತಾರೆ—

ದಾನವೆಂದರೆ ತಲೆಯ ಚಾಣದಲಿ ಕಡಿದಂತೆ
ತಾನೊಂದು ತಪ್ಪುಮಾಡಿ ನೂಱುಾಱನು
ಮೌನದಿಂ ಕೊಡುವ ಸರ್ವಜ್ಞ॥

ಎಱೆಯಲೊಲ್ಲದ ಲೋಭಿ ಕಱೆಯಲೊಲ್ಲದ ಆವು
ಬಱಗಾಲ ಪಯಣ ಇವು ಮೂಱು ತನ್ನ ತಾ
ನಿಱಿದುಕೊಂಡಂತೆ ಸರ್ವಜ್ಞ॥

ಪಾಪಿ ಗಳಿಸಿದ್ದು ಪರರ ಪಾಲು: ಲೋಭಿ ಗಳಿಸಿದ್ದಕ್ಕೆ ಲೋಪ.
ದ್ದರಿಂದ—

ಸಿರಿಯು ಭರ ಉಳ್ಳಾಗ ಮಱೆಯದಿರುವವ ಜಾಣ
ಕೊಱತೆಯಾದಾಗ ಕೊಡಲೆನಗಿಲ್ಲೆಂದು
ಅಱಸುವನೆ ಹೆಡ್ಡ ಸರ್ವಜ್ಞ॥

ದಾನಗಳೆಲ್ಲೆಲ್ಲಾ ಅನ್ನದಾನವೇ ಶ್ರೇಷ್ಠ; ದೇವರನ್ನು ಮೆಚ್ಚಿಸ
ೇಕಾದರೆ ಅನ್ನದಾನಕ್ಕಿಂತ ಮತ್ತೊಂದಿಲ್ಲ.—

ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ?
ಅನ್ನವಿರುವನಕ ಪ್ರಾಣವು; ಜಗದೊಳ
ಗನ್ನವೇ ದೈವ! ಸರ್ವಜ್ಞ॥

ದಾನವು, ಜೈನರು ಹೇಳುವಂತೆ, ಆಹಾರ ಅಭಯ ಭೈಷಜ್ಯ
ಸ್ತ್ರ ಎಂದು ನಾಲ್ಕು ವಿಧ. ಅವುಗಳಲ್ಲಿ ಎಲ್ಲಕ್ಕೂ ಮೊದಲು
ರತಕ್ಕದ್ದು ಆಹಾರ. ಅನ್ನವಿಲ್ಲದವನಿಗೆ ಶಾಸ್ತ್ರವೇನು ಮನಸ್ಸಿಗೆ
ಡಿಸೀತು?

ಸಿದ್ಧಿಗಳು ಬಾರವು ಬುದ್ಧಿಗಳು ತಿಳಿಯುವು
ಮುದ್ದಿನ ಮಾತು ಸೊಗಸದು ಬೋನದ
ಮುದ್ದೆ ತಪ್ಪಿದರೆ ಸರ್ವಜ್ಞ॥

ಅನ್ನವಿಲ್ಲದಿದ್ದರೆ ಮನುಷ್ಯನು ಮಾನಮರ್ಯಾದೆಗಳನ್ನು ಬಿಟ್ಟು
ಡಿಯಬೇಕಾಗುವುದು. ಮಾಡಬಾರದ್ದನ್ನೂ ಮಾಡಬೇಕಾಗು
ದು.—

ಕೊಟ್ಟಣವ ಕುಟ್ಟಿಪುದು ಮಟ್ಟೆಯನು ಹೊಱಿಸುವುದು
ಬಿಟ್ಟಿ ಕೂಲಿಗಳ ಮಾಡಿಸುವುದು ಗೇಣು
ಹೊಟ್ಟೆ ಕಾಣಯ್ಯ ಸರ್ವಜ್ಞ॥

೧೦. ರಾಜ-ರಾಜಧರ್ಮ-ರಾಜಭಕ್ತಿ

ತ್ಯಾಗಬುದ್ಧಿಯು ಸಾಮಾನ್ಯ ಜನಕ್ಕಿಂತ ಹೆಚ್ಚಾಗಿ ರಾಜನಲ್ಲಿ ಇರಬೇಕು. ರಾಜನು ಪ್ರಜೆಗಳ ತಂದೆ; ಅವರನ್ನು ಅವನು ತನ್ನ ಶೌರ್ಯದಿಂದಲೂ ಔದಾರ್ಯದಿಂದಲೂ ವಿಶ್ವಾಸದಿಂದಲೂ ಕಾಪಾಡಬೇಕು. ಬಡವನ ದಾನ ಏನು ದಾನ?

ರಾಗವಿಲ್ಲದ ವಿದ್ಯೆ ಭೋಗವಿಲ್ಲದ ನಿದ್ರೆ
ತ್ಯಾಗವಿಲ್ಲದವನ ದೊರೆತನ ಹಾಳೂರ
ಗೂಗೆಯಂತಕ್ಕು ಸರ್ವಜ್ಞ॥

ಅಸಗನತಿಗರ್ವಿಸಲು ಹಸು ಕಾಡಿ ಕಱೆಯಲು
ಉಸುರಿಲ್ಲದರಸು ಪ್ರಭುವಾಗೆ, ಪ್ರಜೆಯೆಲ್ಲ
ಮಸಿವಣ್ಣವಕ್ಕು ಸರ್ವಜ್ಞ॥

ಊರಿಗೆ ದೊರೆ ರೂಪು ನಾರಿಗೆ ಗುಣ ರೂಪು
ಚಾರುಕೋಕಿಲೆಗೆ ಸ್ವರ ರೂಪು ರಾಜಗೆ
ಧೀರತ್ವ ರೂಪು ಸರ್ವಜ್ಞ॥

ಪ್ರಜೆಗಳಿಗೆ ಮೇಲ್ಪಂಕ್ತಿಯಾಗಿದ್ದು, ಅವರ ಯೋಗಕ್ಷೇಮವನು ನೋಡಿಕೊಳ್ಳುವ ರಾಜನಿಲ್ಲದಿದ್ದರೆ ಎಲ್ಲವೂ ಅವ್ಯವಸ್ಥೆಗೆ ಇಟ್ ಕೊಳ್ಳುತ್ತದೆ—

ಗುರುವು ಇಲ್ಲದ ಮಠವು ಹಿರಿಯರಿಲ್ಲದ ಮನೆಯು
ಅರಸಿಲ್ಲದೂರು ಇವು ಮೂಱು ನುಲಿ ಹಱಿದ
ಹೊರಸಿನಂತಕ್ಕು ಸರ್ವಜ್ಞ॥

ಈಗಿನ ಕಾಲದಲ್ಲಿ, ಹಿರಿಯರ ಅಂಕೆ, ಗುರುವಿನ ಬೋ

ಅರಸಿನ ಶಿಕ್ಷೆ ಇವು ಇರಬೇಕೆನ್ನುವವರು ಕಡಮೆ. ಸ್ವಪ್ರವೃತ್ತಿ ಸ್ವಾತಂತ್ರ್ಯಪ್ರೀತಿ ಇವು ಹೆಚ್ಚಾಗುತ್ತಿವೆ. ಆದರೆ ಸರ್ವಜ್ಞನು ಸ್ವಾತಂತ್ರ್ಯದ ಬೆಲೆಯನ್ನೇನು ಅರಿಯದವನಲ್ಲ.—

ತಂತ್ರಿವಾಕ್ಯವು ಲೇಸು ಮಂತ್ರಿಯಾ ಕೆಳೆ ಲೇಸು
ಯಂತ್ರವಾಹಕನ ದಯೆ ಲೇಸು ಜಗದಿ ಸ್ವ
ತಂತ್ರವೇ ಲೇಸು ಸರ್ವಜ್ಞ॥

ಆದರ್ಶನಾದ ರಾಜನು ಸತ್ಯವಂತನಾಗಿಯೂ ಶೀಲವಂತನಾಗಿಯೂ ಇರಬೇಕು—

ನೆತ್ತ ವಿತ್ತಕೆ ಬಲವು ಒತ್ತೆ ಸೂಳೆಗೆ ಬಲವು
ಕತ್ತಲೆಯು ಬಲವು ಕಳ್ಳಂಗೆ ಅರಸಿಗೆ
ಸತ್ಯವೇ ಬಲವು ಸರ್ವಜ್ಞ॥

ಪರನಾರಿಸೋದರನು ವರಶತ್ರುದಲ್ಲಣನು
ಕರಪಾಪಭಯನು ಹೊರೆವ ಗುಣಯುತ ನೃಪಗೆ
ಸ್ಥಿರವಿಹಳು ಲಕ್ಷ್ಮಿ ಸರ್ವಜ್ಞ॥

ಅವನಿಗೆ ತಕ್ಕ ಮಂತ್ರಿಯಿದ್ದರೆ ರಾಜ್ಯವು ಸುರಕ್ಷಿತವಾಗಿರುತ್ತದೆ.—

ಮಂತ್ರಿಯುಳ್ಳಾ ರಾಜ್ಯವೆಂತಿರಿಸಿದಂತಕ್ಕು
ಮಂತ್ರಿಯಿಲ್ಲದನ ಸಾಮ್ರಾಜ್ಯ ಕೀಲ್ಗಳೆದ
ಜಂತ್ರದಂತಕ್ಕು ಸರ್ವಜ್ಞ॥

ಹೀಗೆ ರಾಜನು ಎಷ್ಟು ಒಳ್ಳೆಯವನಾದರೂ ಜನಕ್ಕೆ ಸದರ ಕೊಡಬಾರದು—

ಅಜ್ಞೆ ಇವು ಇರದಿರೆ ಹೊಲ್ಲ ಕರಿಯು ಬೆದಜಿಲು ಹೊಲ್ಲ
ಅಜ್ಞೆಯದೂರೊಳಗೆ ಇರಹೊಲ್ಲ ದೊರೆಗಳಿಗೆ
ಸರಸವೇ ಹೊಲ್ಲ ಸರ್ವಜ್ಞ॥

ಜನರೂ, ಅವನು ಒಳ್ಳೆಯವನೆಂದು ಸದರ ವಹಿಸಬಾರದು. ಅನುಗ್ರಹಮಾಡಲು ಸಾಮರ್ಥ್ಯವಿರುವವನಿಗೆ ನಿಗ್ರಹಮಾಡಲೂ ಸಾಮರ್ಥ್ಯವಿರುತ್ತದೆ. ಆದ್ದರಿಂದ—

ಅರಸನೋಲಯ್ಸುವರೆ ಕರಭೀತಿ ಬೇಕಯ್ಯ
ಅರಸು, ಕರಿ, ಉರಗನೊಳೆಚ್ಚರಿಲ್ಲದಡೆ
ತ್ವರಿತದಿಂ ಕೊಲುಗು ಸರ್ವಜ್ಞ॥

ಮೆಚ್ಚಿದಂತರಸಿನಲಿ ಎಚ್ಚರಿಂದಿರಬೇಕು
ಎಚ್ಚರವು ತಪ್ಪಿ ನಡೆದರೆ ಆ ಮೆಚ್ಚು
ಕಿಚ್ಚಿನುತಕ್ಕು ಸರ್ವಜ್ಞ॥

ಇದಕ್ಕೆ ಅನೇಕ ಕಾರಣಗಳಿರುತ್ತವೆ—

ಅರಸ ರಕ್ಕಸನಂತೆ ವರಮಂತ್ರಿ ಹುಲಿಯಂತೆ
ಬರೆವಾತ ನಾಡ ನರಿಯಂತೆ ಪರಿವಾರ
ಗರಗಸದಂತೆ ಸರ್ವಜ್ಞ॥

ಮತ್ತು

ಹರಿವ ನೀರೆಳೆವಳ್ಳಿ ತುರಗ ಭೈತ್ರವು ಬಂಡಿ
ಅರಸಿನ ಮನವು ಬೆಲೆವೆಣ್ಣು ಇವು ಏಳು
ತಿರುಹುವವರಿಚ್ಛೆ ಸರ್ವಜ್ಞ॥

ದೇವರಲ್ಲಿ ಹೇಗೋ ರಾಜನಲ್ಲಿಯೂ ಹಾಗೆಯೇ ಭಕ್ತಿಯಿಂದಿರ ಬೇಕು—

ಅಡಿಯು ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧಫಲ ; ಸ್ವಾಮಿಕಾರ್ಯಕ್ಕೆ
ಮಡಿಯಲೇಬೇಕು ಸರ್ವಜ್ಞ॥

ಪ್ರಜೆಗಳಿದ್ದರೇ ರಾಜ; ಪ್ರಜೆಗಳಿಂದಲೇ ರಾಜ—

ಮಂದಿಯಿಲ್ಲದ ರಾಜ್ಯ ಕಂದನಿಲ್ಲದ ಭಾಗ್ಯ
ಬಂಧುವಿಲ್ಲದ ಮನೆತನ ಜಗದೊಳು
ಚಂದವಲ್ಲೆಂದ ಸರ್ವಜ್ಞ॥

ಅವರಲ್ಲಿ ಸಿರಿಯೂ ಸಂತೋಷವೂ ನೆಲಸಿದ್ದರೆ, ತಾನು ಸುಖವಾಗಿ ರಾಜ್ಯಭಾರಮಾಡಬಹುದು ; ತನ್ನ ಭಂಡಾರವು ತುಂಬಿರುತ್ತದೆ :—

ಭಂಡಾರ ತುಂಬಿ ನೀ ಬಂಡಿಯಲಿ ಹೇಱುವರೆ
ಮಂಡಲವನಾಳಿ ಮೆಱೆವರೆ ಒಕ್ಕಲನು
ಕೊಂಡಾಡಬೇಕು ಸರ್ವಜ್ಞ॥

೧೧. ಸಂಸಾರ-ಹೆಂಗಸರು

ಹೆಂಗಸರನ್ನು ಕುರಿತು ನೂರಾರು ಪದ್ಯಗಳಿವೆ: ಅವರ ಗುಣ ಅವಗುಣ, ಸ್ಥಾನಮಾನ, ಇಹಪರಗಳಲ್ಲಿ ಅವರಿಂದ ಆಗುವ ಒಳ್ಳೆಯದು ಕೆಟ್ಟದು, ಕಷ್ಟ ಸುಖ ಇವುಗಳ ವಿಚಾರವಾಗಿ ಹಲವು ಚಿತ್ರವಿಚಿತ್ರವಾದ ಮಾತುಗಳಿವೆ.

"ಹೆಣ್ಣಿನಿಂದಲಿ ಇಹವು ಹೆಣ್ಣಿನಿಂದಲಿ ಪರವು, ಹೆಣ್ಣಿಂದ ಸಕಲ ಸಂಪದವು". ಹೆಂಗಸಿಲ್ಲದ ಬಾಳು ಏನು ಬಾಳು?

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯಿದಂತೆ ಸರ್ವಜ್ಞ॥

ದೇವಾಧಿದೇವತೆಗಳೂ ಅವರಿಗೆ ಮಾರುಹೋಗಿದ್ದಾರೆ—

ಹೆಂಗಸು

ಹರಿಯ ಉರವನು ಮೆಟ್ಟಿ ಹರನ ಶಿರವನು ಹತ್ತಿ
ಸರಸಿಜೋದ್ಭವನ ಮೊಗಗೆಡಿಸಿ ಮಿಱಿದಳು
ಹಿರಿಯರಿನ್ನಾರು ಸರ್ವಜ್ಞ॥

ಆದರೆ ಅವರು ಒಲಿಯುವುದು ಯಾರ ಯತ್ನ?

ಅಂಗನೆಯರೊಲಿಯುವುದು ಬಂಗಾರ ದೊರೆಯುವುದು
ಸಂಗ್ರಾಮದೊಳಗೆ ಗೆಲುವುದು ಇವು ಮೂಱು
ಸಂಗಯ್ಯನೊಲುಮೆ ಸರ್ವಜ್ಞ॥

ಅನುಕೂಲಳಾದ ಹೆಂಡತಿಯಿದ್ದರೆ ಇಹಲೋಕವೇ ಸ್ವರ್ಗ ಸಮಾನವಾಗುತ್ತದೆ—

ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನ್ನಱಿವ ಸತಿಯಾಗೆ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ॥

ಅಂಥವಳೊಡನೆ ಬಾಳ್ವೆಮಾಡುವುದು "ಅಮೃತದ ಕೆನೆಯ ಸವಿದಂತೆ". ಹಾಗಲ್ಲದೆ, ಹೆಂಗಸು ಹಿತವಿಲ್ಲದವಳಾಗಿ ಹೋರಾಡುತ್ತ ಲೊಟಗುಟ್ಟುತ್ತ ಇರುವವಳಾದರೆ ಸಂಸಾರವು ಅಸಾರವಾಗುತ್ತದೆ, ಅಸಹ್ಯವಾಗುತ್ತದೆ.

ಅಡಕೆಯಿಲ್ಲದ ವೀಳ್ಯ ಕಿಟಕಿಯಿಲ್ಲದ ಮನೆಯು
ಒಡಕು ಬಾಯವಳ ಮನೆವಾರ್ತೆ ಎಣ್ಣೆಯ
ಕುಡಿಕೆಯೊಡೆದಂತೆ ಸರ್ವಜ್ಞ॥

ಸೋರುವಾ ಮನೆಯಿಂದ ದಾರಿಯಾ ಮರ ಲೇಸು!
ಹೋರುವಾ ಸತಿಯ ಬದುಕಿಂದ ಪೊಡೆಮೊಯ್ವ
ಮಾರಿಯೇ ಲೇಸು ಸರ್ವಜ್ಞ॥

ಚುಚ್ಚುವಾ ಕೆರದಿಂದ ಕಚ್ಚುವಾ ಶುನಿ ಲೇಸು
ನಿಚ್ಚಲು ಉಲಿವ ಸತಿಯಿಂದ ಉರಿದಿರ್ಪ
ಕಿಚ್ಚು ತಾ ಲೇಸು ಸರ್ವಜ್ಞ॥

ಒಟ್ಟಿನ, ಮೇಲೆ,

ನಾರಿ ಪರರುಪಕಾರಿ ನಾರಿ ಸ್ವರ್ಗಕೆ ದಾರಿ
ನಾರಿ ಸಕಲರಿಗೆ ಹಿತಕಾರಿ, ಮುನಿದರೆ
ನಾರಿಯೇ ಮಾರಿ ಸರ್ವಜ್ಞ॥

ಹಿಂದೆ ಸಮಾಜದಲ್ಲಿ ಸೂಳೆಗೆ ಒಂದು ಸ್ಥಾನವಿತ್ತು; ಪ್ರೋತ್ಸಾಹ ವಿತ್ತು: ಆದರೆ ಸರ್ವಜ್ಞನು ಎಂಥವರಿಗೂ ಸೂಳೆಯ ಸಹ ವಾಸವೇ ಯೋಗ್ಯವಲ್ಲವೆನ್ನುತ್ತಾನೆ—

ಒಂದೆಲಗ ಮೆಲಹೊಲ್ಲ ನಿಂದಕನ ನೆರೆ ಹೊಲ್ಲ
ತಂದೆಯನು ಜರಿವ ಮಗ ಹೊಲ್ಲ ಸೂಳೆಯ
ದಂದುಗವೆ ಹೊಲ್ಲ ಸರ್ವಜ್ಞ॥

೧೨. ನಡೆ-ನುಡಿ

ಮನುಷ್ಯನ ಗುಣಶೀಲಗಳು ನಿರ್ಧರವಾಗುವುದು ಅವನ ನಡೆ ನುಡಿಗಳಿಂದ; ಅವನು ಬದುಕುವುದೂ ಕೆಡುವುದೂ ಅವು ಗಳಿಂದಲೇ—

ಕಣ್ಣು ನಾಲಗೆ ಮನವು ತನ್ನದೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನ ಕೊಲ್ಲುವುವು ಸರ್ವಜ್ಞ॥

ಇಂದ್ರಿಯಚಪಲತೆಗೆ ಒಳಗಾದರೆ ಒಂದರ ಹಿಂದೆ ಮತ್ತೊಂದು ಅನರ್ಥ ಒದಗುತ್ತದೆ. ಸಾಲವೊಂದೇ ಸಾಲದೇ?

ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ ಕಿಬ್ಬದಿಯ
ಕೀಲ ಮುರಿದಂತೆ ಸರ್ವಜ್ಞ॥

ಗಸ್ತಿವಿಲ್ಲದ ಮೋಜು ಮಸ್ತು ಇಲ್ಲದ ಚೀಲ
ಬಿಸ್ತಿಯ ಸಾಲ ತೆರುವನಾ ಬಾಳುವೆಯು
ಆಸ್ತಿಕ್ಕು ಬೇಡ ಸರ್ವಜ್ಞ

ಬಂಗಿ, ಸಾರಾಯಿ, ತಂಬಾಕು ಇವುಗಳನ್ನು ಸೇವಿಸುವುದು ದುರಭ್ಯಾಸ: ಆದರೆ ತಾಂಬೂಲವು ಕೆಟ್ಟದ್ದಲ್ಲ; ಅದರಿಂದ ಆರೋಗ್ಯ, ಅಲಂಕಾರ—

ಗಾಳಿದೂಳಿಯ ದಿನಕೆ ಮಾಳಿಗೆಯ ಮನೆ ಲೇಸು
ಹೋಳಿಗೆ ತುಪ್ಪ ಉಣಲೇಸು ಬಾಯಿಗೆ
ವೀಳೆಯವೆ ಲೇಸು ಸರ್ವಜ್ಞ॥

ಎಲೆಯ ಮೆಲ್ಲದ ಬಾಯಿ ತಲೆಯಿಲ್ಲದಾ ಮುಂಡ:
ಎಲೆ ಮೆದ್ದು ಬರಲು ಬೀದಿಯಲಿ ಈರಯ್ಯ
ತಲೆಯನಂತಕ್ಕು ಸರ್ವಜ್ಞ॥

ಸರಳತೆ, ಸೌಶೀಲ್ಯ, ಸತ್ಯ, ಪ್ರಾಮಾಣಿಕತೆ. ಗುರುಹಿರಿಯರಲ್ಲಿ ಭಕ್ತಿ ಇವು ಬದುಕುವುದಕ್ಕೆ ಮಾರ್ಗ. ಲೋಭರಾಹಿತ್ಯ. ಕಾಯಕ ಇವು ಸರಳತೆಗೆ ಹೆಗ್ಗುರುತು. ಲೋಭದಿಂದ ಏನೂ ಲಾಭವಿಲ್ಲ.

ಲೋಭದಿಂ ಕೌರವನು ಲಾಭವನು ಪಡೆದಿಹನೆ?
ನಾಭಿಯಿಂ ಕೆಳಗೆ ಎರಡೂರು ಕೊಂಬಾಗ
ಲಾಭ ಬಂದಿಹುದೆ ಸರ್ವಜ್ಞ॥

ಪರಸ್ವತ್ತು ಹೇಗೋ ಪರಸತಿಯೂ ಹಾಗೇ: ಎರಡೂ ಮನೆ ಹಾಳುಮಾಡುವವೇ—

ಒಡಲ ಹಿಡಿದಾಡದಿರು ನುಡಿಯ ಹೋಗಾಡದಿರು
ನಡೆಯೊಳೆಚ್ಚ್ತಜೀವ ಬಿಡದಿರು ಪರಸತಿಯ
ಕಡೆಗೆ ನೋಡದಿರು ಸರ್ವಜ್ಞ॥

ಆಶೆಯಿಂದ ಅಸತ್ಯ. ಅಧರ್ಮ ಎಲ್ಲಾ ಬರುತ್ತವೆ—

ನುಡಿಸುವುದಸತ್ಯವನು ಕೆಡಿಸುವುದು ಧರ್ಮವನು
ಹಿಡಿಸುವುದು ಕಟ್ಟ ಒಡಲನು ಲೋಭದ
ಗಡಣ ತಾನಯ್ಯ ಸರ್ವಜ್ಞ॥

ವೀರಶೈವ ವಚನಕಾರರೆಲ್ಲರೂ ಕಾಯಕಕ್ಕೆ ತುಂಬ ಪ್ರಾಶಸ್ತ ಕೊಡುತ್ತಾರೆ. ಕಾಯಕ ಮಾಡುವವನ ದೇಹ ಮನಸ್ಸುಗಳ ಆರೋಗ್ಯವಾಗಿರುತ್ತವೆ: ಅಂಥವನು ಸಮಾಜಕ್ಕೆ ಹೊರೆಯಾಗ ವುದಿಲ್ಲ. ಕಾಯಕದಿಂದಲೇ ಕೈಲಾಸ.

ಆರೋಗ್ಯವಾಗಿರುತ್ತವೆ: ಅಂಥವನು ಸಮಾಜಕ್ಕೆ ಹೊರೆಯಾಗಂ ವುದಿಲ್ಲ. ಕಾಯಕದಿಂದಲೇ ಕೈಲಾಸ.

ಆಲಸಿಕೆಯುಲಿರುವಂಗೆ ಕಲಸಲಂಬಲಿಯಿಲ್ಲ
ಕೆಲಸಕೆ ಅಲಸದಿರುವಂಗೆ ಬೇರಿಂದ
ಹಲಸು ಕಾತಂತೆ ಸರ್ವಜ್ಞ ॥

ಕಾಯಕಮಾಡಿ ಅಷ್ಟೋ ಇಷ್ಟೋ ಗಳಿಸಿರುವವನಿಗೆ ಗೌರವ; ದುಡ್ಡಿಲ್ಲದವನಿಗೆ ಏನಿದೆ?

ಧನಕನಕವುಳ್ಳನಕ ದಿನಕರನಂತಕ್ಕು
ಧನಕನಕ ಹೋದ ಮಱುದಿನ ಹಾಳೂರು
ಶುನಕನಂತಕ್ಕು ಸರ್ವಜ್ಞ ॥

ಸತ್ಯವು ಶೀಲದ ತಿರುಳು; ನಿಜ ಹೇಳುವವರು ಇಕ್ಕಟ್ಟಿಗೆ ಸಿಕ್ಕ ಬಹುದು ;

ಕಂಡುದನು ಆಡೆ ಭೂಮಂಡಲವು ಮುನಿಯುವುದು
ಕೊಂಡಾಡು ತಿಚ್ಚೆ ನುಡಿದರೆ ಜಗವೆಲ್ಲ
ಮುಂಡಾಡುತಿಹುದು ಸರ್ವಜ್ಞ ॥

ಆದರೇನು? ಅವರು ಸತ್ಯವಂತರೆಂಬುದು ಗೊತ್ತಾದರೆ,

ಸತ್ಯರಿಗೆ ಧರೆಯೆಲ್ಲ ಮಸ್ತಕದಿ ಎಱಗುವುದು
ಹೆತ್ತ ತಾಯ್ಮಗನ ಕರೆವಂತೆ ಶಿವನವರ
ನೆತ್ತಿಕೊಂಬುವನು ಸರ್ವಜ್ಞ ॥

ಉಪ್ಪಿಲ್ಲ ದುಣಹೊಲ್ಲ ಮುಪ್ಪು ಬಡತನ ಹೊಲ್ಲ
ತಪ್ಪನು ನುಡಿವ ಸತಿ ಹೊಲ್ಲ; ಒಪ್ಪಿರಲು
ತಪ್ಪುವುದೆ ಹೊಲ್ಲ ಸರ್ವಜ್ಞ ॥

ಹಾಸು ಇಲ್ಲದ ನಿದ್ರೆ ಪೂಸು ಇಲ್ಲದ ವಿವಾಹ
ಭಾಷೆಯುಱಿಯದನ ಗೆಳೆತನ ಮೋಟಗ್ಗೆ
ಬೀಸಿ ಕರೆದಂತೆ ಸರ್ವಜ್ಞ ॥

ಮಂತೊಬ್ಬರನ್ನು ನಿಂದಿಸಬಾರದು :

ರಾಗ ಯೋಗಿಗೆ ಹೊಲ್ಲ ಭೋಗ ರೋಗಿಗೆ ಹೊಲ್ಲ
ಓಗರ ಎಣ್ಣೆ ಉಣಹೊಲ್ಲ ಪರನಿಂದೆ
ಆಗಲೂ ಹೊಲ್ಲ ಸರ್ವಜ್ಞ ॥

ತಾನು ಸುಮ್ಮನಿದ್ದರೂ ನೀಚರು ಕೀಟಲೆಮಾಡಿ ಜಗಳ ತೆಗೆ ಬಹುದು, ಬಯ್ಯಬಹುದು; ತಾನು ಯೋಗ್ಯನಾಗಿದ್ದರೆ ಅದರಿಂ ಏನೂ ಆಗುವುದಿಲ್ಲ. ಪ್ರತಿಯಾಗಿ ಬಯ್ದರೆ ಮಾನಗೇಡು :

ಆನೆ ಬೀದಿಲಿ ಬರಲು ಶ್ವಾನ ತಾ ಬೊಗಳುವುದು
ಶ್ವಾನನಂತಾನೆ ಬೊಗಳಿದರೆ ಆನೆಯು
ಮಾನವೇ ಹಾನಿ ಸರ್ವಜ್ಞ ॥

ಮಾತಿಗೆ ಮಾತು ಕೊಡುವುದು ಒಂದು ವಿಶೇಷವಲ್ಲ ; ಎ ಹೇಗೆ ಎಷ್ಟು ಮಾತನಾಡಬೇಕೆಂದು ತಿಳಿದುಕೊಳ್ಳುವುದು ಕಷ್ಟ ಅದೇ ಒಂದು ವಿದ್ಯೆ.

ಮಾತು ಬಲ್ಲಾತಂಗೆ ಯಾತವು ಸುರಿದಂತೆ
ಮಾತಾಡಲಱಿಯದಾತಂಗೆ ಬಱಿಯಾತ
ನೇತಾಡಿದಂತೆ ಸರ್ವಜ್ಞ ॥

ಮಾತಿನಲ್ಲಿ ರಸಿಕತೆಯಿದ್ದರೆ ಕೇಳುವವರಿಗೆ ಆನಂದ ; ಇಲ್ಲದಿದ್ದ ಅದು ಕರ್ಣಕಠೋರ :

ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ
ರಸಿಕನಲ್ಲವನ ಬಱಿಮಾತು ಕಿವಿಯೊಳ್ ಕೂ
ರ್ದಸಿಯು ಬಡಿದಂತೆ ಸರ್ವಜ್ಞ ॥

ಅದರಲ್ಲಿಯೂ "ನಕ್ಕು ನಗೆಸುವಾ ನುಡಿ ಲೇಸು."

ಮಾತಿನಲ್ಲಿ ಅಡಕವಿರಬೇಕು ; ಹುರುಳು ಇರಬೇಕು : ಇಲ್ಲ ದ್ದರೆ ಅದು ವ್ಯರ್ಥ :

ಮಾತಿನಾ ಮಾಲೆಯೂ ತೂತಾದ ಮಡಕೆಯೂ
ಹಾತೆಯೂ ಹುಲ್ಲ ಸರವೆ ಇವು ನಾಲ್ಕು
ಏತಕ್ಕು ಬೇಡ ಸರ್ವಜ್ಞ ॥

ಮಾತಿನಲ್ಲಿ ವಿನಯ ವಿವೇಕಗಳಿರಬೇಕು ; ಇಲ್ಲದಿದ್ದರೆ ಅಪಾರ ನಷ್ಟವಾಗುತ್ತದೆ :

ಉದ್ದಾರುಟು ಮಾತಾಡಿ ಇದ್ದುದನು ಹೋಗಾಡೆ
ಉದ್ದನ ಮರದ ತುದಿಗೇಱಿ ಕೈಜಾಱಿ
ಬಿದ್ದು ಸತ್ತಂತೆ ಸರ್ವಜ್ಞ ॥

ಇವೆಲ್ಲವನ್ನೂ ದೊಡ್ಡವರಿಂದ ಕಲಿತುಕೊಳ್ಳಬೇಕು ; ಅವರಲ್ಲಿಟ್ಟ ಗೌರವವು ವ್ಯರ್ಥವಾಗುವುದಿಲ್ಲ.

ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎಱಗಿದರೆ
ನರಸು-ರರೊಲಿದು ಸಿರಿ ಸುರಿದು ಕೈಲಾಸ
ಕರತಲಾಮಲಕ ಸರ್ವಜ್ಞ ॥

ಅವರಿಗೆ ಕಿರಿಯರಲ್ಲಿ ಪ್ರೀತಿಯಿರುತ್ತದೆ. ಅಂಥವರ ದರ್ಶನವೆ ಶ್ರೇಯಸ್ಸು :

ಜಾಣೆಯಾ ನುಡಿ ಲೇಸು ವೀಣೆಯಾ ಸ್ವರ ಲೇಸು
ಮಾಣದೆ ವದನ ಶುಚಿ ಲೇಸು ಕೂರ್ಪವರ
ಕಾಣುವದೆ ಲೇಸು ಸರ್ವಜ್ಞ ॥

೧೩ ಕಾಲಜ್ಞಾನ-ವಾದ-ವೈದ್ಯ

ಮಹಾತ್ಮರೆನಿಸಿಕೊಂಡವರು ಮುಂದಾಗುವುದನ್ನು ತಿಳಿದು ಹೇಳಬೇಕು, ಚಿನ್ನ ಮಾಡುವುದನ್ನು ಅರಿತಿರಬೇಕು, ರೋಗಗಳಿಗೆ ಔಷಧ ಕೊಡಬೇಕು, ಎಂದು ಮುಂತಾಗಿ ಇಂದಿಗೂ ಜನರಲ್ಲಿ ಭಾವನೆಯಿದೆ. ಗೋಸಾಯಿಗಳನ್ನು ಆಶ್ರಯಿಸಿ ಜನರು ರಸ ವಿದ್ಯೆಯನ್ನು ಕಲಿಯಲು ಪ್ರಯತ್ನಿಸುತ್ತಿರುವುದನ್ನು ಎಲ್ಲರೂ ನೋಡಿರಬಹುದು. ಪ್ರಾಯಶಃ ಸರ್ವಜ್ಞನೂ ವಿರಕ್ತನಾಗಿ ಗೋಸಾಯಿಯ ಹಾಗೆ ತಿರುಗುತ್ತಿದ್ದನೆಂದು ತೋರುತ್ತದೆ. ಆದರೆ ಅವನಿಗೆ ಕಾಲಜ್ಞಾನ ಹೇಳುವ ಶಕ್ತಿ ಎಷ್ಟರಮಟ್ಟಿಗೆ ಇತ್ತೋ ಗೊತ್ತಿಲ್ಲ. ಈಚೆಗೆ ಯಾರೋ ಅವನ ಆರಾಧಕರು ಈ ವಿಧವಾದ ಮಹತ್ವವನ್ನು ಅವನಲ್ಲಿ ಆರೋಪಿಸಿರಬಹುದು. ಅಂತು ಸರ್ವಜ್ಞನ ಹೆಸರಿನಲ್ಲಿ "ಕಾಲಜ್ಞಾನ"ದ ಪದ್ಯಗಳು ಕೆಲವು ಇವೆ. ಇವು ಗಳನ್ನು ಬರೆದ ಸರ್ವಜ್ಞನೇ ಬೇರೆಯಿದ್ದರೂ ಇರಬಹುದೆಂಬ ಸಂದೇ ಹವನ್ನು ಹಿಂದೆ ಸೂಚಿಸಿದೆ (ಪುಟ ೬). ಈ ಪದ್ಯಗಳಲ್ಲಿ ಅವ ತಾರಪುರುಷನಾದ ವೀರ ವಸಂತರಾಯನ ಆಗಮನ, ವಿಜಯ ನಗರರಾಜ್ಯದ ನಾಶ, ಇಂಗ್ಲಿಷಿನವರು ಇಂಡಿಯಕ್ಕೆ ಬಂದು ರಾಜ್ಯವನ್ನು ಗೆದ್ದು ರೈಲು ತಂತಿ ಮುಂತಾದವುಗಳನ್ನು ಹಾಕಿದ್ದು ಈ ವಿಚಾರಗಳೆಲ್ಲಾ ಬರುತ್ತವೆ.

"ರಸವಾದ"ದಲ್ಲಿ, ಎಂದರೆ ಪಾದರಸ ತಾಮ್ರ ಮುಂತಾದವು ಗಳಿಂದ ಚಿನ್ನ ಮಾಡುವ ವಿದ್ಯೆಯಲ್ಲಿ, ಹಿಂದಿನ ಕಾಲದ ಜನರಿಗೆ ತುಂಬ ಚಪಲ. ಪಾದರಸದಿಂದ ಚಿನ್ನವಾಗುವುದು ಅಸಂಭವವಲ್ಲ ವೆಂದೂ, ಚಿನ್ನವೂ ಪಾದರಸವೂ ತುಂಬ ಹತ್ತಿರ ಇರತಕ್ಕ ವಸ್ತು ಗಳೆಂದೂ ಈಚೆಗೆ ವಿಜ್ಞಾನಿಗಳು ಪ್ರಯೋಗಶಾಲೆಯಲ್ಲಿ ಪರೀಕ್ಷ

ನಡೆಸಿ ತೋರಿಸಿದ್ದಾರೆ. ಆದರೆ ಅದು ಮೂಲಿಕಾದಿ ಪ್ರಯೋಗ ದಿಂದ ಹೇಗೆ ಸಾಧ್ಯವೋ ಯಾರೂ ತೋರಿಸಿಲ್ಲ. ಅಂತೂ ಆ ವಿಷಯಕವಾದ ಕೆಲವು ಪದ್ಯಗಳೂ ಇವೆ. ಇವುಗಳಲ್ಲಿ ಹೇಳುವ ಗಿಡಮೂಲಿಕೆಗಳಾಗಲಿ ಅವುಗಳನ್ನು ಉಪಯೋಗಿಸುವ ಕ್ರಮ ವಾಗಲಿ ತಿಳಿಯುವುದಿಲ್ಲ. ಅಂಥ ಎರಡು ಪದ್ಯಗಳನ್ನು ಮುಂದೆ ಕೊಟ್ಟಿದೆ—

ರಸವುಂಟಂಗಡಿಯಲ್ಲಿ ಕಿಸು[1]ವುಂಟು ಸಾಲೆಯಲಿ
ವಸುಭಟನೆಂಬ ಗಿಡನುಂಟು ವಾದಿಗಳು
ಹಸಿದರೇಕೆಂದ ಸರ್ವಜ್ಞ॥

ನಾಗ[1]ಸತುವುಗಳೆರಡು ನಾಗದಾ ರಸಮೂಜು
ಮೇಗೆ ಅಂಜಿಯನೊಡಗೂಡೆ ಹೇಮ ತಾ
ನಾಗಲೇ ಬಕ್ಕು ಸರ್ವಜ್ಞ॥

ಹಿಂದೆ, ವೈದ್ಯವಿದ್ಯೆಯೂ ವಾದವಿದ್ಯೆಯೂ ಒಟ್ಟಿಗೆ ಇರುತ್ತಿದ್ದ ವೆಂದು ತೋರುತ್ತದೆ. ಆದ್ದರಿಂದಲೇ 'ವಾದಭ್ರಷ್ಟ, ವೈದ್ಯ ಶ್ರೇಷ್ಠ' ಎಂಬ ಹೇಳಿಕೆ ಇದೆ. ಸರ್ವಜ್ಞನು ಅಂಥ ಘನ ಚಿಕಿತ್ಸೆ ಗಳನ್ನೂ ಔಷಧಗಳನ್ನೂ ಏನೂ ಹೇಳಿಲ್ಲ. ವೈದ್ಯನನ್ನು ದೂರ ವಿಟ್ಟಿರುವುದು ಹೇಗೆ, ಎಂದರೆ ಆರೋಗ್ಯವಾಗಿರುವುದು ಹೇಗೆ, ಎಂಬ ವಿಷಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಿದ್ದಾನೆ. ಮನೆಯಲ್ಲಿ ಮುದುಕರಿಂದ ಇಂಥ ಮಾತು ಕೇಳಬರುವುದುಂಟು—

ಉಂಡು ಕೆಂಡವ ಕಾಸಿ ಉಂಡು ಶತಪಥ ನಡೆದು
ಉಂಡೆಡದ ಮಗ್ಗುಲಲಿ ಮಲಗಿದರೆ ವೈದ್ಯನ
ಬಂಡಾಟವಿಲ್ಲ ಸರ್ವಜ್ಞ॥

---

1 ಕಿಸು = ತಾಮ್ರ.
1 ನಾಗ = ಸೀಸ.

ಇದರಲ್ಲಿ ಎಷ್ಟು ನಿಜವಿದೆಯೋ ಅನುಭವವಿರುವವರು ಹೇ ಬೇಕು; ನಿಜವಿದ್ದರೆ ಏಕೆ ಎಂಬುದನ್ನು ಶರೀರ ಶಾಸ್ತ್ರಜ್ಞರ ವಿಚಾರಮಾಡಬೇಕು.

ಹಸಿಯದಿರೆ ಉಣಬೇಡ ಹಸಿದು ಮತ್ತಿರಬೇಡ
ಬಿಸಿ ಬೇಡ ತಂಗೂಳುಣಬೇಡ ವೈದ್ಯರಾ
ಬೆಸನವೇ ಬೇಡ ಸರ್ವಜ್ಞ॥

ಆರೋಗ್ಯ ಬೇಕೆನ್ನುವವನಿಗೆ ಇದು ಅತ್ಯುತ್ತಮವಾದ ನಿಯಮ ವೆಂಬುದರಲ್ಲಿ ಸಂದೇಹವಿಲ್ಲ.

ಅಕ್ಕಿ, ಜೋಳ, ನವಣೆ, ರಾಗಿ—ಇವುಗಳಲ್ಲಿ ನವಣೆಯು ಮೇ ಅವನಿಗೆ ತುಂಬ ಮೆಚ್ಚಿಗೆ ಎಂದು ತೋರುತ್ತದೆ. "ನವಣೆಯ ನುಂಬುವನು ಹವಣಾಗಿ ಇರುತಿಹನು".

ನವಣೆಯ ಜೊನ್ನಕ್ಕೆ ಹವಣಾಯ್ತ ತೊಗೆಯಾಗಿ
ಕವಣೆಗಳಷ್ಟು ಬೇಣ್ಣಾಲ ದರೂಟದ
ಹವಣ ನೋಡೆಂದ ಸರ್ವಜ್ಞ॥

ನೀರೋಗಿಯಾಗಿರಬೇಕಾದರೆ ರಾಗಿ ಸರಿ. ತೋಳದಂತಾ ಬೇಕಾದರೆ ಜೋಳವನ್ನು ತಿನ್ನಬೇಕು. ಅಕ್ಕಿ ಎಲ್ಲಕ್ಕಿಂತ ಕಡೆ—

ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು
ಸಿಕ್ಕಿ ರೋಗದಲಿ ರೊಕ್ಕವ ವೈದ್ಯನಿ
ಗಿಕ್ಕುತಲಿರುವ ಸರ್ವಜ್ಞ॥

೧೪. ಜ್ಯೋತಿಷ–ಶಕುನ

ವೇದಾಂತವಾಗಲಿ, ವೈದ್ಯವಾಗಲಿ, ಅದನ್ನು ಸರ್ವಜ್ಞನು ಶಾಸ್ತ್ರಾನುಸಾರವಾಗಿ, ಶಾಸ್ತ್ರೀಯವಾದ ರೀತಿಯಲ್ಲಿ, ಪಂಡಿತರು ಮೆಚ್ಚುವಂತೆ, ಬೋಧಿಸುವುದಕ್ಕೆ ಹೋಗುವುದಿಲ್ಲ. ಅವನು ಹೇಳಿರುವುದು, ಸಾಮಾನ್ಯವಾಗಿ ಅನುಭವದಿಂದ ಬಂದು ಎಲ್ಲರ ಲ್ಲಿಯೂ ಪ್ರಚಾರದಲ್ಲಿದ್ದು ಎಲ್ಲರಿಗೂ ಅರ್ಥವಾಗುತ್ತಿದ್ದದ್ದು. ಹೀಗೆ ಅವನು ಜ್ಯೋತಿಷದ ಗಣಿತ, ಫಲ, ಶಕುನ ಮುಂತಾದವುಗಳ ಮೇಲೂ ಕೆಲವು ಪದ್ಯಗಳನ್ನು ಬರೆದಿದ್ದಾನೆ—ನಕ್ಷತ್ರ, ಕರಣ, ಯೋಗ, ತಾರೆ ಇವುಗಳನ್ನು ಕಂಡುಹಿಡಿಯುವ ಸುಲಭ ಮಾರ್ಗ, ಮಳೆ ಬರುವ ಲಕ್ಷಣ, ಗುರು, ಶನಿ ಮುಂತಾದ ಗ್ರಹಗಳ ಚಾರದಿಂದ ಒದಗುವ ಫಲ ಮುಂತಾದ ಅಂಶಗಳನ್ನು ಇವುಗಳಲ್ಲಿ ಕಾಣಬಹುದು.

ಇವು ಮಳೆ ಬರುವುದರ ಸೂಚನೆಗಳು :

ಅಡವಿ ಮೂಡಲು ಮಿಂಚೆ ಪಡುವಲಕೆ ಧನುವೇಳೆ
ಬಡಗಣದ ಗಾಳಿ ಕಡುಬೀಸೆ ಮಳೆಯು ತಾ
ತಡೆಯದಲೆ ಬಕ್ಕು ಸರ್ವಜ್ಞ॥

ತೆಂಕಲಿಗೆ ಮುಗಿಲಡಜಿ ಶಂಕರನ ದೆಸೆ ಮಿಂಚೆ
ಪಂಕಜಾರಾತಿ ಗುಡಿಗಟ್ಟೆ ಮಳೆಯು ತಾ
ಭೋಂಕನೆ ಬಕ್ಕು ಸರ್ವಜ್ಞ॥

ಶಕುನಗಳಲ್ಲೆಲ್ಲಾ ಸೀನಿಗೆ ಬಹುಬೆಲೆಯಂತೆ!

ಏನ ಮನ್ನಿಸದಿರಲು ಸೀನ ಮನ್ನಿಸಬೇಕು
ಸೀನ ಮನ್ನಿಸದೆ ಹೋದರೆ ಹೋದಲ್ಲಿ
ಹಾನಿಯೇ ಬಕ್ಕು ಸರ್ವಜ್ಞ॥

ಒಮ್ಮೆ ಸೀತರೆ ಹೊಲ್ಲ ಇಮ್ಮೆ ಸೀತರೆ ಲೇಸು
ಕೆಮ್ಮಿ ಕೇಕರಿಸಿ ಉಗುಳುವ ಲೇಸು ಆ
ಬೊಮ್ಮಗೂ ಇಲ್ಲ ಸರ್ವಜ್ಞ॥

ಹೀಗೆ ಸರ್ವಜ್ಞ ವಚನಗಳು ಮುಖ್ಯವಾಗಿ ಇಹಪರ ಸುಖ ಸಾಧಕಗಳಾದ ನೀತಿಯನ್ನೂ ಧರ್ಮವನ್ನೂ ಬೋಧಿಸುತ್ತವೆ. ಇವುಗಳ ಜೊತೆಗೆ ಕೇವಲ ಚಮತ್ಕಾರ ಮಾತ್ರವುಳ್ಳ ಕೆಲವು ಒಗಟುಗಳೂ ಇವೆ. ಅವುಗಳಲ್ಲಿ ಹತ್ತನ್ನು ಆರಿಸಿ ಮುಂದೆ ಕೊಟ್ಟಿದೆ.

೧೫. ಒಗಟುಗಳು

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ ಶಿಖಿಂಕ್ಕೆ ಬೆಳಕಾಗಿ
ಬಲ್ಲವರು ಹೇಳಿ ಸರ್ವಜ್ಞ॥ (ಸುಣ್ಣದ ಹರಳು)

ಕಾಲಿಲ್ಲದೇ ಹರಿಗು ತೋಳಿಲ್ಲದೆ ಹೊಜುಗು
ನಾಲಗಿಲ್ಲದಲೆ ಉಲಿಯುವುದು ಕವಿಕುಲದ
ಮೇಲುಗಳು ಪೇಳಿ ಸರ್ವಜ್ಞ॥ (ಹೊಳೆ)

ಹತ್ತುಸಾಸಿರ ಕಣ್ಣು ನೆತ್ತಿಲಾದರು ಬಾಲ
ಸುತ್ತಿನ ಹುಳವ ಹಿಡಿಯುವುದು ಕವಿಜನರ
ಮೊತ್ತವಿದ ಹೇಳಿ ಸರ್ವಜ್ಞ॥ (ನವಿಲು)

ಹಲ್ಲುನಾಲಗೆಯಿಲ್ಲ ಸೊಲ್ಲು ಸೋಜಿಗವಿಲ್ಲ
ಕೊಲ್ಲದೆ ಮೃಗವ ಹಿಡಿಯುವುದು ಲೋಕದೊಳ
ಗೆಲ್ಲ ಠಾವಿನೊಳು ಸರ್ವಜ್ಞ॥ (ಬಲೆ)

ನೆತ್ತಿಯಲಿ ಉಂಬುವುದು ಸುತ್ತಲೂ ಸುರಿಸುವುದು
ಎತ್ತಿದರೆ ಎರಡು ಹೋಳಹುದು ಕವಿಗಳಿದ
ನುತ್ತರವ ಹೇಳಿ ಸರ್ವಜ್ಞ॥ (ಬೀಸುವ ಕಲ್ಲು)

ಕಾಲುಂಟು ನಡೆಯದದು ಮೂಲೆಯಲಿ ಕಟ್ಟಿಹುದು
ಬಾಲಕರ ಸೊಮ್ಮ ಪೊಱುವುದು ಕವಿಗಳಲಿ
ಬಾಲರಿದ ಪೇಳಿ ಸರ್ವಜ್ಞ॥ (ತೊಟ್ಟಿಲು)

ಅರೆವ ಕಲ್ಲಿನ ಮೇಲೆ ಮರವು ಹುಟ್ಟಿದ ಕಂಡೆ
ಪುರದ ಮೇಲಿರದು ಕರ ಕಂಡೆ ವಾಸನೆಯು
ಬರುತಿಹುದ ಕಂಡೆ ಸರ್ವಜ್ಞ॥ (ಸಾಣೆಕಲ್ಲು)

ಕಡೆ ಕಪ್ಪು ನಡು ಬಿಳಿದು ಉಡುವ ವಸ್ತ್ರವದಲ್ಲ
ಬಿಡದೆ ನೀರುಂಟು ಮಡುವಲ್ಲ ಕವಿಗಳೀ
ಬೆಡಗ ಪೇಳುವುದು ಸರ್ವಜ್ಞ॥ (ಕಣ್ಣು)

ಕಾಲಿಲ್ಲ ಕೊಂಬುಂಟು ಬಾಲದಾ ಪಕ್ಷಿಯದು
ಮೇಲೆ ಹಾಱುವುದು ಹದ್ದಲ್ಲ ಕವಿಗಳಲಿ
ಬಾಲರಿದ ಹೇಳಿ ಸರ್ವಜ್ಞ॥ (ಗಾಳಿಪಟ)

ಹಲ್ಲುಂಟು ಮೃಗವಲ್ಲ ಸೊಲ್ಲು ಸೋಜಿಗವಲ್ಲ
ಕೊಲ್ಲುವುದು ತನ್ನ ನಂಬಿದರ ಇದನಱಿದು
ಬಲ್ಲವರು ಪೇಳಿ ಸರ್ವಜ್ಞ॥ (ಗರಗಸ)

೧೨. ನೀತಿಕಾವ್ಯ-ಸಾಹಿತ್ಯದಲ್ಲಿ ಅದರ ಸ್ಥಾನ

ಸಂಸ್ಕೃತ ದ್ರಾವಿಡ ಸಾಹಿತ್ಯಗಳಲ್ಲಿ ನೀತಿ ಕಾವ್ಯಗಳಿಗೇನು ಕೊರತೆಯಿಲ್ಲ. ಮಹಾಭಾರತ ರಾಮಾಯಣ ಪುರಾಣ ಪುಣ್ಯ ಕಥೆಗಳೆಲ್ಲಾ ನೀತಿಮಯ. ಶುಕ್ರನೀತಿ, ಚಾಣಾಕ್ಯನೀತಿ ಮುಂತಾದ ಲೌಕಿಕ ನೀತಿಗಳು ಬೇರೆ. ಪಂಚತಂತ್ರ ಹಿತೋಪದೇಶ ಮುಂತಾದ ನೀತಿಕಥಾ ಸಾಹಿತ್ಯವೂ ಇದೆ. ಧರ್ಮವಿಚಾರ ನೀತಿಬೋಧೆಗಳಿಲ್ಲದ ಮಹಾಕಾವ್ಯವಿಲ್ಲ. ಸುಭಾಷಿತಾವಳಿಗಳೂ ನೀತಿಶತಕಗಳೂ ಬೇಕಾದಷ್ಟಿವೆ. ಕನ್ನಡ ಸಾಹಿತ್ಯದಲ್ಲಿ ಪುರಾಣಗಳು ಪೌರಾಣಿಕ

ಕಾವ್ಯಗಳು ಸ್ತೋತ್ರಗಳು ಶತಕಗಳು ವಚನಗಳು ಕೀರ್ತನೆಗಳು ಎಲ್ಲಾ ನೀತಿ ಪ್ರಧಾನವಾದವುಗಳೇ. ತಮಿಳು ತೆಲುಗು ಸಾಹಿತ್ಯ ಗಳಲ್ಲಿಯೂ ಹೀಗೆಯೇ ಇದೆ. ತಮಿಳಿನ ಕುಱಳ್ ಕಾವ್ಯವು ಸರ್ವಜ್ಞನಿಗಿಂತ ಎಷ್ಟೋ ಹಿಂದಿನ ಇಂಥ ಕಾವ್ಯ; ತೆಲುಗಿನ ವೇಮನನ ಕಾವ್ಯವು ಸರ್ವಜ್ಞನಿಗಿಂತ ಸ್ವಲ್ಪ ಈಚಿನ ಇಂಥ ಕಾವ್ಯ. ಇವು ಆ ಭಾಷೆಗಳಲ್ಲಿ ಜನಪ್ರಿಯವಾಗಿ ಉತ್ತಮ ಕಾವ್ಯಗಳೆನಿಸಿ ಕೊಂಡಿವೆ. ಸರ್ವಜ್ಞನು ಕನ್ನಡಿಗರ ತಿರುವಳ್ಳುವರ್, ಕನ್ನಡಿಗರ ವೇಮನ. ಅವರಂತೆ ಇವನಿಗೂ ನೀತಿ ಸಾಹಿತ್ಯದಲ್ಲಿ ಉಚ್ಚಸ್ಥಾನವು ಸಲ್ಲುತ್ತದೆ.

ಸರ್ವಜ್ಞನ ಕಾವ್ಯ ಒಟ್ಟಿನ ಮೇಲೆ ನೀತಿಕಾವ್ಯ. ನೀತಿ ಕಾವ್ಯವು ಕಾವ್ಯವೇ ಅಲ್ಲ, ಒಂದು ಪಕ್ಷ ಕಾವ್ಯವಾದರೂ ಉತ್ತಮ ಕಾವ್ಯವಲ್ಲ ಎಂದು ಹೇಳುವುದುಂಟು. ನೀತಿ ಎಂದರೆ ನೀರಸ, ಅಪ್ರಿಯ ಎಂಬುದು ಇದರ ಭಾವ. ಇದು ಸ್ವಲ್ಪ ಮಟ್ಟಿಗೆ ನಿಜ. ಆದರೆ ಕಾವ್ಯ ಉತ್ತಮವಾಗುವುದು ಬರಿಯ ಅದರ ಸಾಮಗ್ರಿ ಯಿಂದಲೇ ಅಲ್ಲ. ಅದರ ಗುಣ ನಿಷ್ಕರ್ಷೆಯಲ್ಲಿ ವಸ್ತುವೆಷ್ಟು ಮುಖ್ಯವೋ ರೂಪ ರೀತಿಗಳೂ ಅಷ್ಟೇ ಮುಖ್ಯ. ಬೆಳ್ಳಿ ಬಂಗಾರ ಗಳ ಗಟ್ಟಿಗಳು ಯಾವ ಆಕಾರಗಳಲ್ಲಿದ್ದರೂ ಅವು ಬೆಳ್ಳಿ ಬಂಗಾರ ಗಳೇ; ಅವುಗಳ ಬೆಲೆ ಹೆಚ್ಚು ಕಡಿಮೆಯಾಗುವುದಿಲ್ಲ. ಆದರೆ ಕಲೆಯ ಮಾತು ಬೇರೆ. ಮಣ್ಣು, ಕಲ್ಲು, ಕಬ್ಬಿಣ, ಮರ, ದಂತ, ಬೆಳ್ಳಿ, ಬಂಗಾರ—ಯಾವ ಪದಾರ್ಥವೇ ಆಗಿರಲಿ, ಅದರಿಂದ ಮಾಡಿದ ಕಲಾಕೃತಿಯ ರೂಪ ರಚನೆಗಳಿಂದ ಅದರ ಬೆಲೆ ಹೆಚ್ಚು ಕಡಮೆಯಾಗುತ್ತದೆ. ರಸಿಕನಾದ ಕವಿಯ ಕೈಗೆ ಸಿಕ್ಕಿದರೆ, ಕಸವೂ ರಸವಾಗುತ್ತದೆ. ಕವಿಯಲ್ಲದ ಅರಸಿಕನ ಕೈಗೆ ಸಿಕ್ಕಿದರೆ ರಸವೂ ಕಸವಾಗುತ್ತದೆ. ರಸಿಕತೆಯೇ ಕವಿಯ ಜೀವನ. ಅದು ಸರ್ವಜ್ಞ ನಲ್ಲಿ ಬೇಕಾದಷ್ಟಿದೆ. ಆದ್ದರಿಂದ ಅವನ ನೀತಿ ಕಾವ್ಯವು ಕಾವ್ಯ ವಾಗಿದೆ, ಉತ್ತಮ ಕಾವ್ಯವಾಗಿದೆ.

೧೭. ಖಂಡನಕಾವ್ಯ-ವಿಡಂಬನ ಕಾವ್ಯ ಅವುಗಳ ವಿಶೇಷಗುಣ

ಯಾವನೊಬ್ಬ ವ್ಯಕ್ತಿಯನ್ನೂ ಹಿಡಿದು ಬಯ್ಯದೆ, ಗುಣಾವಗುಣಗಳನ್ನೇ ಹಾಸ್ಯಮಾಡಿ ಬರೆಯುವ ಖಂಡನಕಾವ್ಯಗಳಲ್ಲಿಯೂ ವಿಡಂಬನಕಾವ್ಯಗಳಲ್ಲಿಯೂ ಇನ್ನೊಂದು ವಿಶೇಷವಿದೆ. ಅದೇನೆಂದರೆ, ಪ್ರತಿಯೊಬ್ಬರೂ ಅವುಗಳನ್ನು ಓದಿ ಸಂತೋಷಪಡುತ್ತಾರೆ. ಅವುಗಳಲ್ಲಿ ಹೊಗಳಿರುವ ಗುಣಗಳೆಲ್ಲವೂ ತಮ್ಮಲ್ಲಿವೆ ಎಂದುಕೊಳ್ಳುತ್ತಾರೆ. ದೋಷಗಳೆಲ್ಲವೂ ತಮಗೆ ಆಗದವರಲ್ಲಿವೆ ಎಂದುಕೊಳ್ಳುತ್ತಾರೆ. ಇವು ಹಸುಂಬೆಯ ಚೀಲದಹಾಗೆ; ಬೆನ್ನಿನ ಮೇಲಿರುವ ಭಾಗದಲ್ಲಿ ತಮ್ಮ ತಪ್ಪುಗಳು ಬೆನ್ನು ಮುರಿಯುವಷ್ಟಿರಬಹುದು; ಆದರೂ ಅವು ಬೆನ್ನಮೇಲಿವೆ, ಆದ್ದರಿಂದ ಮರೆಯಾಗಿವೆ. ಮುಂದಿನ ಚೀಲದಲ್ಲಿ ಇತರರ ತಪ್ಪುಗಳಿವೆ. ಎಲ್ಲೋ ನಾಲ್ಕಾರಿದ್ದರೂ ಅವು ಸದಾ ಕಣ್ಣ ಮುಂದಿರುತ್ತವೆ; ಆದ್ದರಿಂದ ಕಂಡೇ ಕಾಣುತ್ತವೆ. "ಇದು ಒಂದು ವಿಚಿತ್ರವಾದ ಕನ್ನಡಿ. ಅದರಲ್ಲಿ ಪ್ರತಿಯೊಬ್ಬರಿಗೂ ತಮ್ಮ ಮುಖ ಹೊರತು ಮಿಕ್ಕೆಲ್ಲರ ಮುಖವೂ ಕಾಣುತ್ತದೆ"—ಎಂದು ಒಬ್ಬ ವಿಡಂಬನಕಾರನು ಹೇಳಿದ್ದಾನೆ. ನಮ್ಮ ಮುಖದ ವಿಕಾರ ಸರಿಯಾದ ಕನ್ನಡಿಯ ಮುಂದೆ ನಿಂತಾಗ ತಾನೇ ಕಂಡೀತು? ಏಕೆಂದರೆ ವಿಕಾರವಿಲ್ಲದವರು ಯಾರು? "ಕೋತಿ ಎಲ್ಲಿದೆ?" ಎಂದು ಕೇಳಿದರೆ "ಕನ್ನಡಿಯಲ್ಲಿ!" ಎಂಬುದು ಉತ್ತರ.

೧೮. ಸರ್ವಜ್ಞನ ಶೈಲಿ

ಸರ್ವಜ್ಞನು ರಸಿಕನೆಂದು ಭರ್ತೃಹರಿಯಂತೆ ಶೃಂಗಾರ ಶತಕ
ವನ್ನೇನು ಬರೆದಿಲ್ಲ. ಹೆಣ್ಣುಗಳನ್ನು ಬಣ್ಣಿಸಿ ಅವರ ಒಲವು
ವಯ್ಯಾರದ ನಡೆನುಡಿಗಳಿಂದ ಬಾಯಲ್ಲಿ ನೀರೂರಿಸುವುದು ಅವನ
ಮಾರ್ಗವಲ್ಲ. ಹೀಗೆಂದರೆ, ಅವನು ಅವುಗಳ ಸ್ವರೂಪವನ್ನೂ
ಬೆಲೆಯನ್ನೂ ಅರಿಯದ ಅರಸಿಕನೆಂದು ಭಾವಿಸಬಾರದು
"ಹೆಣ್ಣೊಲ್ಲದಣ್ಣಗಳು ಎಲ್ಲಿ ಸರ್ವಜ್ಞ?" ಎಂದು ಅವನೇ
ಕೇಳಿದ್ದಾನೆ. ಅವನು ಇಹಜೀವನದ ಸುಖದುಃಖಗಳೆರಡನ್ನೂ
ಬಲ್ಲನು; ಆದ್ದರಿಂದ ಸುಖವೊಂದನ್ನೇ ನೋಡಿ ಅದರಲ್ಲಿ ಮರುಳಾಗಿ
ದುಃಖದ ಕಡೆಗೇ ನೋಡದೆ, ಕಂಡರೂ ಕಣ್ಣು ಮುಚ್ಚಿಕೊಂಡು
ರಾತ್ರಿ ನೋಡಿದ ಹಾಳುಭಾವಿಗೆ ಹಗಲು ಹೋಗಿ ಬೀಳಬೇಡಿರೆಂದು
ಎಚ್ಚರಿಕೆ ಕೊಡುತ್ತಾನೆ. ಇದರಂತೆ ಮಿಕ್ಕ ಮೋಹಗಳು, ಮಾಯ
ಗಳು, ಮೌಢ್ಯಗಳು. ಅವನ ರಸಿಕತೆ ಕಂಡುಬರುವುದು ಅವುಗಳನ್ನು
ಖಂಡಿಸುವ ರೀತಿಯಲ್ಲಿ. ನೀತಿ ಕಾವ್ಯಗಳೊಳಗೆ ಸಾಮಾನ್ಯವಾ
ಕಂಡುಬರುವ ಗುರುತ್ವ ಗಾಂಭೀರ್ಯಗಳಿಗೆ ಬದಲಾಗಿ ಅವನ
ಲಘುತ್ವ ಹಾಸ್ಯಗಳನ್ನು ತಂದುಹಾಕುತ್ತಾನೆ. ಆದರೆ ಅವನ
ಬೆಣ್ಣೆಯ ಹೊನ್ನಪ್ಪನಲ್ಲ; ಅವನ ಭಾವ ಭಾಷೆಗಳಲ್ಲೇನು ಜೇನು
ತುಪ್ಪ ತೊಟ್ಟಿಕ್ಕುತ್ತಿರುವುದಿಲ್ಲ. ತನ್ನ ತಿಂಡಿಗೆ ಅವನು ಸಕ್ಕರೆಯ
ಪಾಕ ಹಾಕುವುದಕ್ಕೆ ಬದಲಾಗಿ, ಉಪ್ಪು ಖಾರ ಹಚ್ಚಿ, ನಿಂಬೆಯ
ಹುಳಿ ಹಿಂಡಿ, ಇಂಗು ಹಾಕಿಕೊಡುವುದೇ ಹೆಚ್ಚು. ಮಾರ್ದವ
ಮಾಧುರ್ಯ, ನಯ, ನವಿರು, ಸುಳಿವು, ಸೂಚನೆ ಇವು ಸಾಮಾನ್ಯ
ವಾಗಿ ಬಹಳ ಕಡಿಮೆ. ಮಾತುಗಳು ಕೆಲವು ವೇಳೆ ಕಪಾಳ
ಕೊಟ್ಟಂತಿರುತ್ತವೆ. ಛಟೀರನೆ ಚಾಟಿಯಿಂದ ಏಟು ಹೊಡೆದಂ

ಬೀಳುತ್ತವೆ. ಆ ಚಾಟಿಗೇನು ಮೊಕಮಲ್ಲು ಸುತ್ತಿರುವುದಿಲ್ಲ, ಕಲಾಪತ್ತು ಕಿಂಕಾಪು ನೆಯ್ದಿರುವುದಿಲ್ಲ; ಸುನೇರಿ ಅಂಟಿಸಿರುವುದಿಲ್ಲ; ಮುಳ್ಳುಕೋಲು ಹುಟ್ಟಿದ್ದು ಹುಟ್ಟಿದ ಹಾಗಿರುತ್ತದೆ.

ಕರೆಯದಲೆ ಬರುವವನ ಬರೆಯದಲೆ ಓದುವನ
ಬಱಿಗಾಲಿನಿಂದ ನಡೆವವನ ಕರೆತಂದು
ಕೆರದಿಂದ ಹೊಡೆಯೆಂದ ಸರ್ವಜ್ಞ॥

ಎಂಬುವನ್ನು ಇದಕ್ಕೆ ಉದಾಹರಣೆಯಾಗಿ ಹೇಳಬಹುದು. ಅವನಿಗೆ ಯಾರದ್ದು ಏನು ದಾಕ್ಷಿಣ್ಯ, ಹಂಗು? ಯಾರಿಗೆ ಒಳ್ಳೆಯವನಾಗಿ ಯಾರಿಂದ ಅವನಿಗೆ ಏನಾಗಬೇಕಾಗಿದೆ? ಸುಖಭೋಜನವೇ? ಒಳ್ಳೆಯ ವಸತಿಯೇ? ಅವೇ ಬೇಡ!

ಹುಗಿನರಮನೆಯಿಂದ ವಿಂಗಡದ ಗುಡಿ ಲೇಸು
ಭಂಗಬಟ್ಟುಂಬ ಬಿಸಿಯನ್ನಕಿಂತಲು
ತಂಗುಳವೆ ಲೇಸು ಸರ್ವಜ್ಞ॥

ತನ್ನನ್ನು ಮತ್ತೊಬ್ಬರು ಹೊಗಳಲಿಲ್ಲವಲ್ಲಾ ಎಂಬ ಸಂಕಟವಾಗಲಿ, "ಕವಿಗಳು ನಿರ್ಮತ್ಸರರಾಗಲಿ" ಎಂಬ ಪ್ರಾರ್ಥನೆಯಾಗಲಿ ಅವನ ವಚನಗಳಲ್ಲಿ ಎಲ್ಲಿಯೂ ಕಂಡು ಬರುವುದಿಲ್ಲ. ಇದರ ಮೇಲೆ ಅವನು ಹೇಳುವುದು ಸುಳ್ಳೋ? ಅಲ್ಲದೆ, ಯಾರ ಯಾರ ವಿಚಾರವಾಗಿ ಅಪ್ರಿಯವಾದ ಮಾತುಗಳನ್ನು ಆಡಿದ್ದಾನೋ ಅಂಥವರು ಹೊರಗೆ ಹಾರಾಡಿ ಹೋರಾಡಿದರೂ ಒಳಗೆ ಅವನ ಮಾತು ನಿಜವೆಂದುಕೊಳ್ಳುತ್ತಾರೆ; ಅಪ್ರಯತ್ನವಾಗಿ ತಿದ್ದಿಕೊಳ್ಳುತ್ತಾರೆ.

ಅವನ ಉದ್ದೇಶವೂ ಅದೇಯೆ. ಜನರು ತಮ್ಮ ಲೋಪದೋಷಗಳನ್ನು ಸರಿಪಡಿಸಿಕೊಂಡು ಜಳ್ಳನ್ನೂ ಕಾಳನ್ನೂ ವಿವೇಚನೆಮಾಡಿ ತಿಳಿದುಕೊಂಡು, ಉಪಯೋಗಿಸಿ ಉತ್ತಮವಾಗಿ ಬಾಳಿ ಬದುಕಬೇಕೆಂಬುದು–ಹುಚ್ಚುನಾಯಿಯಹಾಗೆಕಂಡಕಂಡವ್ದರ

ಮೇಲೆಲ್ಲಾ ಬಿದ್ದು ಕಚ್ಚಬೇಕೆಂಬುದಲ್ಲ; ಅವನ ಮನೋಭಾವವೂ ಅಂತಹುದೇ: ಇಡೀ ಪ್ರಪಂಚದೊಡನೆಯೇ ಅತೃಪ್ತಿ ಹೊಂದಿ, ಎಲ್ಲರನ್ನೂ ಹಳಿಯುತ್ತ ದೂರುತ್ತ ಸರ್ವದಾ ಗೊಣಗುಟ್ಟುತ್ತಿರುವುದಲ್ಲ: ಭಗವಂತನ ಲೀಲೆಯನ್ನು ಬಲ್ಲವನೋ ಎಂಬಂತೆ ಸದಾ ತೃಪ್ತನಾಗಿ, ನಗುನಗುತ್ತ, ತೋರಿದ್ದನ್ನು ತೋರಿದಂತೆ ತಡೆಬಡೆಯಿಲ್ಲದೆ ಹೇಳಿಬಿಡುವುದು. ದಂಭ, ದುರ್ಗುಣ, ದುರಾಚಾರ, ದುರಹಂಕಾರ ಇವುಗಳನ್ನು ಕಂಡರೆ ಮಾತ್ರ ಅವನಿಗೆ ನೋವೂ ಅಸಹನೆಯೂ ಹತ್ತಿ ಉರಿಯೇಳುತ್ತವೆ; ಆಗ ಅವುಗಳ ಮುಂದೆ ನಿಲ್ಲುವುದೂ ಕಷ್ಟವಾಗುತ್ತದೆ; ಕೆಲವು ವೀರಶೈವ ವಚನಕಾರರೂ ವೈಷ್ಣವ ಕೀರ್ತನಕಾರರೂ ಇಂಥವರೇ. ಈ ವಚನಗಳನ್ನು ನೋಡಿ—

"...ಇಂತಿರ್ದಜಾಯದೆ ಪರ್ವತಕ್ಕೆ ಪೋಗಿ ಪಾತಾಳಗಂಗೆಯಲ್ಲಿ ಮುಳುಗಿ ತಲೆಯ ಬೋಳಿಸಿಕೊಂಡು ಗಂಗೆಯೊಳು ಕೋಣನ ಹಾಗೆ ಮೈಗೆಟ್ಟು, ಪಕ್ಕನೆ ಮುಳುಗಿ ಅಲ್ಲಿಂದ ಬಂದು ಅನ್ನ ವಸ್ತ್ರ ಕುಸುಮವಂ ಕೊಟ್ಟು ಪಾಪ ಪೋಯಿತ್ತೆಂದು, ಅಲ್ಲಿಂದ ಬಂದು ಲಿಂಗವನಮಿಗಳಿಗೆ ಹೊಯ್ದು ಬಾರದ ಪಾಪವ ತಾವಾಗ ಬರಿಸಿಕೊಂಡು ತಗರ ಜನ್ಮದಲ್ಲಿ ಹುಟ್ಟುವರಯ್ಯ..."

"ತುದಿನಾಲಗೆಯಲ್ಲಿ ಭಕ್ತರ ನಂಬಿದೆನೆಂದು ಗಳಹುವ ದೊಡ್ಡ ಹೊಲೆಯನ ಕಂಡೊಡೆ, ಎದೆಎದೆಯನು ಒದ್ದೊದ್ದು ತುಳಿ ಎಂದಾತ ನಮ್ಮ ಅಂಬಿಗರ ಚೌಡಯ್ಯ..."

"...ಕಾಮಕ್ರೋಧದಲ್ಲಿ ಮುಳುಗಿ ಮತಿಗೆಟ್ಟು, ಶಿವಪಥಕ್ಕೆ ದೂರಾಗಿ ದುರಾಚಾರವ ಆಚರಿಸಿ ನಡೆನುಡಿಗಳು ಹೋಜಿತಾಗಿ ವ್ಯರ್ಥ ಹೊತ್ತುಗಳೆದು ಸತ್ತುಹೋಗುವ ಜಡದೇಹಿ ಕಡುಪಾತಕ..."

"ಇಂತಪ್ಪ ಜಂಗಮನು ಪೂಜೆಮಾಡುವಂತಹ ಶಿವಭಕ್ತನು ಉಭಯ ತರ ಮೂಗ ಸೀಳಿ ಮೆಣಸಿನ ಒಟ್ಟು ತುಪ್ಪವ ತುಂಬಿ ಪಡಿಹಾರಿಗಳೆಡದ

ಪಾದುಕೆಯಿಂದ ಬಡಬಡಿಸಿ ಹೊಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು."*

ಸರ್ವಜ್ಞನ ಬರವಣಿಗೆಯೂ ಹೀಗೆಯೇ. ಕೆಲವು ವೇಳೆ ಧೂರ್ತನಂತೆ ವರ್ತಿಸುತ್ತದೆ. ದನದಂತೆ ನುಗ್ಗುತ್ತದೆ. ಅವನು ಯಾವ ಕಠಿಣವಾದ, ಕ್ರೂರವಾದ, ಮಾತನ್ನು ಆಡುವುದಕ್ಕೂ ಹಿಂಜರಿಯುವುದಿಲ್ಲ; ದೇಹದ ಯಾವ ಅಂಗದ ಯಾವ ಕೆಲಸವನ್ನು ಬೇಕಾದರೂ ವಾಚ್ಯವಾಗಿ ಹೇಳಿಬಿಡುತ್ತಾನೆ. ಅವುಗಳ ಉದಾಹರಣೆ ಕೊಡುವುದಕ್ಕೆ ನಮಗೇ ಮನಸ್ಸು ಮುದುರುತ್ತದೆ. ಆದರೆ ಅವನಲ್ಲಿ ಒಳಗೊಂದು ಹೊರಗೊಂದು ಇಲ್ಲ; ಅವನ ಸ್ವಭಾವ ಬೇವಿನ ಹಣ್ಣಿನಂತೆ ಹೊರಗೆ ಸಿಹಿ ಒಳಗೆ ಕಹಿ ಅಲ್ಲ; ಬೆಳ್ಳುಳ್ಳಿಯಂತೆ ಹೊರಗೂ ಒಳಗೂ ಒಂದೇ ಸ್ಪಷ್ಟವಾದ ಬಣ್ಣ—ಒಂದೇ ಕಟುವಾದ ವಾಸನೆ. ಅವನ ರೀತಿಯಲ್ಲಿ ಕುಹಕ, ಕುಚೋದ್ಯ ಬೇಕಾದಷ್ಟಿವೆ; ಆದರೆ ಕೊಂಕು, ಕುಟಿಲತೆ, ಸುತ್ತು ಬಳಸುಗಳು ಇರುವುದಿಲ್ಲ. ಅವನು ಎಂದೂ ಒಳಗೆ ಗರ್ವವನ್ನು ತುಂಬಿಕೊಂಡು ಹೊರಗೆ ಭಕ್ತವಿಗ್ರಹದಂತೆ ನಯವನ್ನು ನಟಿಸುವುದಿಲ್ಲ. ಇದು ಅವನ ಋಜು ಸ್ವಭಾವದ ಫಲವಾಗಿ ಕಾಣುತ್ತದೆ. ಋಜುತೆ ಪ್ರಾಮಾಣಿಕತೆಗಳು ಜೀವನದಲ್ಲಿ ಹೇಗೋ ಬರವಣಿಗೆಯಲ್ಲಿಯೂ ಹಾಗೆಯೇ ಬೆಲೆಯುಳ್ಳ ಗುಣಗಳು. ಪ್ರಾಮಾಣಿಕತೆ ಪರೋಪಕಾರಬುದ್ಧಿಯಿರುವುದರಿಂದಲೇ ಅವನ "ನಕ್ಕು ನಗಿಸುವಾ ನುಡಿ" ಲೇಸು ಆಗಿರುವುದು. ಹೀಗೆ ನಗುವ ಮನೋಧರ್ಮವೂ ನಗಿಸುವ ಮಾತೂ ಪ್ರಾಚೀನ ಸಂಸ್ಕೃತ ಕನ್ನಡ ಸಾಹಿತ್ಯಗಳಲ್ಲಿ ಅಪೂರ್ವ. ಇದನ್ನು ಇಷ್ಟು ಯಥೇಚ್ಛವಾಗಿ ನಮ್ಮ

---

* ಅಂಬಿಗರ ಚೌಡಯ್ಯನ ವಚನಗಳು. ಪುಟ ೫೧-೫೨. ೬೩. ೧೧೩.

ಸಾಹಿತ್ಯದಲ್ಲಿ ತಂದುಕೊಟ್ಟಿರುವುದಕ್ಕಾಗಿ ಕನ್ನಡಿಗರು ಸರ್ವಜ್ಞನಿ
ಎಷ್ಟು ಕೃತಜ್ಞರಾಗಿದ್ದರೂ ಸಾಲದಾಗಿದೆ.

ಸರ್ವಜ್ಞನು ಜನತೆಯ ಕವಿ; ಅವನ ತ್ರಿಪದಿಯು ಜನತೆಯ
ಪದ್ಯ; ಹಾಗೇ ಅದರ ಭಾಷೆಯೂ ಜನದ ಭಾಷೆ; ವ್ಯಾಖ್ಯಾನ
ಗಳನ್ನೂ ನಿಘಂಟುಗಳನ್ನೂ ಇಟ್ಟುಕೊಂಡು ಅದನ್ನು ಅರ್ಥ
ಮಾಡಿಕೊಳ್ಳಬೇಕಾಗಿಲ್ಲ; ಎಂಥ ಕಷ್ಟವಾದ ಅಭಿಪ್ರಾಯಗಳನ್ನಾ
ದರೂ ಅವನು ಸುಲಭವಾದ ಮಾತುಗಳಲ್ಲಿ ಖಚಿತವಾಗಿ ಚಿತ್ರಿಸು
ತ್ತಾನೆ. ಅವನು ಹೇಳುವ ಸಂಗತಿಗಳೂ ಕೊಡುವ ಹೋಲಿಕೆಗಳೂ
ಹಾಗೇ ಎಲ್ಲರಿಗೂ ಪರಿಚಿತವಾದವುಗಳು.—

೧. ಕಸ ಹತ್ತಿದಾರಂಬ, ತೂತಾದ ಮಡಕೆ, ಹಾಳೂರ
ಶುನಕ, ಸೋರುವ ಮನೆ, ಚುಚ್ಚುವ ಕೆರ, ಇಂಗಿನ ಸಾತ, ಹೇನನ್ನು
ತಿನ್ನುವ ಹೀನ, ಕೆಚ್ಚಲ ಮೇಲಿರುವ ಉಣ್ಣೆ, ಹಾವಸೆಯ ಕಲ್ಲು,
ಹಾಳೂರ ಗೂಗೆ, ಹಲ್ಲಿನ ಮಧ್ಯದಲ್ಲಿರುವ ನಾಲಗೆ—ಇತ್ಯಾದಿ.

೨. ಕೆಸರೊಳಗೆ ಮುಳ್ಳು ತುಳಿದಂತೆ, ಮರದ ಮೇಲೆ ಹತ್ತಿ
ಕೈಜಾರಿ ಬಿದ್ದಂತೆ, ಬೇರಿಂದ ಹಲಸು ಕಾತಂತೆ, ಸಾಸವೆ ಎಣ್ಣೆ
ಯನ್ನು ಕಣ್ಣಿಗೆ ಹಾಕಿಕೊಂಡಂತೆ, ಬಟಿಯಾತ ನೇತಾಡಿದಂತೆ,
ಕಿವಿಯೊಳಗೆ ದಸಿ ಬಡಿದಂತೆ, ತಲೆ ಹೋದ ಮುಂಡದಂತೆ,
ಮೋಟು ಕೈ ಬೀಸಿ ಕರೆದಂತೆ, ತವುಡು ತಿಂದಂತೆ, ಕಳ್ಳನು ಮನೆ
ಹೊಕ್ಕುಹೋದಂತೆ, ಎಣ್ಣೆಯ ಕುಡಿಕೆಯೊಡೆದಂತೆ, ನಾಯಿ
ಹಳೆಯ ಕೆರವ ಕಡಿದಂತೆ, ಎತ್ತು ಗಾಣವ ಹೊತ್ತು ಸುತ್ತಿ
ಬಂದಂತೆ, ಭಾನು ಮೋಡದಲಿ ಹೊಳೆವಂತೆ, ಮುದಿಗೂರಲು
ಒದರಿ ಸತ್ತಂತೆ, ಹತ್ತಿದ್ದ ಕಜ್ಜಿ ಹೋದಂತೆ, ಕೂಪದೊಳು ನೇಣು
ಹರಿದಂತೆ, ಅತ್ತಿಮರ ತಾ ಕಾಯ ಹೊತ್ತಿರ್ದಂತೆ—ಇತ್ಯಾದಿ.

ಅನೇಕ ವಾಕ್ಯಗಳು ಗಾದೆಯ ಮಾತುಗಳಂತೆ, ಅನುಭವದ ಸಾರವನ್ನು ಒಳಗೊಂಡು "ವೇದಕ್ಕೆ ಸಮಾನ" ವಾಗಿರುತ್ತವೆ—ಶ್ವಾನ ತೆಂಗಿನಕಾಯ ಮೆಲಬಲ್ಲುದೇ? ಗಜವೇರಿ ಬಪ್ಪವನ ಕುನ್ನಿ ಕಚ್ಚುವುದೇ? ನೆತ್ತದಾ ಹಾಸಂಗಿ ಎತ್ತಬಿದ್ದರುದಾಯ! ಕುರಿ ಕಬ್ಬಿನೊಳಹೊಕ್ಕು ಅರಿವುದೇ ತನಿರಸವ? ಖಂಡಸಕ್ಕರೆಯ ಮೆಲುವಾತ ಮುಗ್ಗಿದ ಹಿಂಡಿಗೆರಗುವನೆ? ನಡುಬೀದಿಯಲ್ಲಿ ದವನ ಬಿತ್ತಿದರೆ ಮುಡಿಯದವರು ಯಾರು? ಇತ್ಯಾದಿ.

ಹೋಲಿಸುವ ವಸ್ತುಗಳು ಕೆಲವು ವೇಳೆ ಪರಸ್ಪರ ಅಸಂಬದ್ಧ ವಾಗಿರಬಹುದು—

"ಆಳು ಸೂಳೆಯು ನಾಯಿ ಕೋಳಿ ಜೋಯಿಸ ವೈದ್ಯ
ಗೂಳಿಯು ತಗರು ಪ್ರತಿರೂಪ ಕಂಡರೆ
ಕಾಳಗವೆಂದ ಸರ್ವಜ್ಞ॥

ಗವುದನೊಳು ಹಗೆತನವು ಕಿವುಡನೊಳು ಏಕಾಂತ
ಪ್ರವುಢನೊಳು ಮೂಢನುಪದೇಶ ಹಸಿದೆದ್ದು
ತವುಡು ತಿಂದಂತೆ ಸರ್ವಜ್ಞ॥

ಆದರೆ ಹೋಲಿಕೆಯಲ್ಲಿ ಔಚಿತ್ಯವಿರುತ್ತದೆ, ಸ್ವಾರಸ್ಯವಿರುತ್ತದೆ.

ಸರ್ವಜ್ಞನು ಪ್ರೌಢವಾದ ಅಲಂಕಾರಗಳ ಗೋಜಿಗೆ ಹೋಗುವು ದಿಲ್ಲ; ಉಪಮಾಲಂಕಾರವೊಂದೇ ಅವನಿಗೆ ಸಾಕು; ಅದು ಯಥೇಚ್ಛವಾಗಿದೆ; ಕವಿಗೆ ಅದೇ ಒರೆಗಲ್ಲು. ಒಂದೆರಡು ಕಡೆ ಶ್ಲೇಷೆ ಬರುತ್ತದೆ; ಅದೂ ಸುಲಭ—ಎರಡೂರು, ತುರುಕರು, ಅವರೆ, ಇತ್ಯಾದಿ. ಆದರೆ ಹೆಚ್ಚು ಅಲಂಕಾರಗಳ ಅಭಾವದಿಂದ ಕಾವ್ಯಕ್ಕೇನು ಕೊರತೆ ಬಂದಿಲ್ಲ.

೧೯. ತ್ರಿಪದಿ

ಸರ್ವಜ್ಞ ವಚನಗಳು "ತ್ರಿಪದಿ"ಯಲ್ಲಿವೆ. ತ್ರಿಪದಿ ಎಂದರೆ ಮೂರು ಪಾದದ ಅಥವಾ ಸಾಲಿನ ಪದ್ಯ ಎಂದು ಅರ್ಥ. (ಇದರ ಲಕ್ಷಣವನ್ನು "ಕನ್ನಡ ಕೈಪಿಡಿ"ಯಲ್ಲಿ ನೋಡಿ.) ವೇಮನನ ಪದ್ಯಗಳು ನಾಲ್ಕು ಪಾದಗಳಿರತಕ್ಕವು—

ತಲ್ಲಿದಂಡ್ರಿಮೀದ ದಯಲೇನಿ ಪುತ್ರುಂಡು
ಪುಟ್ಟನೇಮಿ ಲೇಕ ಗಿಟ್ಟನೇಮಿ
ಪುಟ್ಟಲೋನ ಚೆದಲು ಪುಟ್ಟವಾ ಗಿಟ್ಟವಾ
ವಿಶ್ವದಾಭಿರಾಮ ವಿನರ ವೇಮ॥

ಕುಜಳಿಗೆ ಎರಡೇ ಪಾದ. ಉದಾಹರಣೆ—

ಕಣ್ಣುಡೈಯರೆನ್ಬವರ್ ಕಟ್ರೋರ್ ಮುಗತ್ತಿರಂಡು
ಜ
ಪುಣ್ಣುಡೈಯವರ್ ಕಲ್ಲಾದವರ್॥

ಇದು ಎಷ್ಟು ಚಿಕ್ಕದು, ಆದರೂ ಎಷ್ಟು ಅರ್ಥಗರ್ಭಿತವಾಗಿದ ಎಂಬುದು ಈ ಪದ್ಯದ ಕನ್ನಡ ಭಾಷಾಂತರವನ್ನು ಓದಿದ ತಿಳಿಯುತ್ತದೆ. ರಾವ್‌ಬಹದ್ದೂರ್ ಆರ್. ನರಸಿಂಹಾಚಾರ್ಯರ ವರು 'ನೀತಿಮಂಜರಿ' ಎಂಬ ಹೆಸರಿನಿಂದ ಈ ಗ್ರಂಥದ ಕೆಲ ಭಾಗಗಳನ್ನು ಭಾಷಾಂತರ ಮಾಡಿದ್ದಾರೆ. ಅವು ಕಂದ ಪದ್ಯಗ ಲ್ಲಿವೆ. ಕಂದ ಪದ್ಯವು ನಮ್ಮ ಕನ್ನಡದಲ್ಲಿ ಇರುವ ಚಿಕ್ಕ ಛಂದಸ್ಸು ಆದ್ದರಿಂದ ಕುಜಳ್ ಗ್ರಂಥದ ಆ ಚಿಕ್ಕ ಪದ್ಯಗಳನ್ನು ಈ ಚಿ ಛಂದಸ್ಸಿನಲ್ಲಿ ಅವರು ಕನ್ನಡಿಸಿದ್ದಾರೆ. ಕುಜಳಿನ ಛಂದಸ್ಸಿನಲ್ಲಿಯೆ ನೋಡಬೇಕೆಂದರೆ ಮೇಲಿನ ಪದ್ಯವನ್ನು ಹೀಗೆ ಕನ್ನಡಿಸಬಹುದು—

ಕಣ್ಣಿರುವರೆಂಬವರು ಕಲಿತವರು : ಮೊಗದೆರಡು
ಹುಣ್ಣಿರುವವರು ಕಲಿಯದವರು॥

ಇದನ್ನು ನೋಡಿದರೆ ಸರ್ವಜ್ಞನ ಪದ್ಯಗಳ ಮಾದರಿಯಲ್ಲೇ ಇರುವಹಾಗೆ ಕಾಣುತ್ತದೆ. ಈ ಸರಣಿಯೇ ಪ್ರಾಯಶಃ ಮುಂದೆ ಬೆಳೆದು ತ್ರಿಪದಿಯಾಗಿ ಪರಿಣಮಿಸಬಹುದು. ಬರವಣಿಗೆಯಲ್ಲಿ ಸರ್ವಜ್ಞನ ತ್ರಿಪದಿಯು 'ಕುಟಿಲಿ'ನಷ್ಟೇ ಸಾರವತ್ತಾದದ್ದು, ಅರ್ಥ ಗರ್ಭಿತವಾದದ್ದು. ಅರ್ಥವಿಲ್ಲದ "ಮಾತಿನ ಮಾಲೆ"ಯಲ್ಲಿ ಸರ್ವಜ್ಞನಿಗೆ ಸರ್ವಥಾ ಗೌರವವಿಲ್ಲ—

ಅರ್ಥವಿಲ್ಲದ ಹಾಡು ವ್ಯರ್ಥ ಸಾಸಿರವಿದ್ದು
ಅರ್ಥಿಯಂ ಕತ್ತೆಯಟಿಚಿದೊಡದಟಿಲ್ಲಿ
ಅರ್ಥವುಂಟೆಂದ ಸರ್ವಜ್ಞ॥

ಇದರ ಮೊನೆಯು ಸಾಮಾನ್ಯವಾಗಿ ಪದ್ಯದ ಕೊನೆಯಲ್ಲಿರುತ್ತದೆ.

ತ್ರಿಪದಿ ಎಂದರೆ ಈಗ ಸರ್ವಜ್ಞನ ಪದ್ಯಗಳೇ ತಟ್ಟನೆ ಜ್ಞಾಪಕಕ್ಕೆ ಬರುವುದರಿಂದ ತ್ರಿಪದಿಯನ್ನು ಸರ್ವಜ್ಞನೇ ಕಲ್ಪಿಸಿದ ನೆಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ, ಅವನು ಕಲ್ಪಿಸಿದ್ದಲ್ಲ ಇದು. ಕನ್ನಡ ಛಂದಸ್ಸಿಗೆ ಇದು ಹೊಸದಲ್ಲ; ಬಹಳ ಕಾಲ ದಿಂದಲೂ ಇದೆ. ಸರ್ವಜ್ಞನು ಈ ಛಂದಸ್ಸಿನಲ್ಲಿ ಹೆಚ್ಚಾಗಿ ಬರೆದು, ಅದಕ್ಕೆ ಗ್ರಂಥಗೌರವವನ್ನೂ ಪ್ರಸಿದ್ಧಿಯನ್ನೂ ತಂದನು ಅಷ್ಟೇ. ಸುಮಾರು ಏಳನೆಯ ಶತಮಾನದಲ್ಲಿಯೇ ಇದು ಉಪಯೋಗ ದಲ್ಲಿದ್ದ ಹಾಗೆ ವಾತಾಪಿಯ ಹತ್ತಿರ ಸಿಕ್ಕಿದ ಒಂದು ಶಾಸನದಿಂದ ಕಂಡುಬರುತ್ತದೆ—

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆಱನಲ್ಲ॥

ಹದಿನೈದನೆಯ ಶತಮಾನದಲ್ಲಿ ಮಹಲಿಂಗ ಎಂಬಾತನು 'ಗುರು ಬೋಧಾಮೃತ' ಎಂಬ ಒಂದು ಗ್ರಂಥವನ್ನು ಬರೆದು ಅದರಲ್ಲಿ ತ್ರಿಪದಿಯನ್ನು ಉಪಯೋಗಿಸಿಕೊಂಡಿದ್ದಾನೆ. ಇದು ಅದರಲ್ಲಿನ ಒಂದು ಪದ್ಯ—

ಬಿಂದುಮಾತ್ರದ ಸುಖಕೆ ಮುಂದೆ ಪರ್ವತದಷ್ಟು
ದಂದುಗವ ಹೊತ್ತು ತೊಳಿತೊಳಲಿ ಭವಭವದೊ
ಳೊಂದಿ ಸಾವವಗೇ ಸುಖವುಂಟೇ॥

ಕಟ್ಟಡ, ಧಾಟಿ, ವಿಷಯ, ಮಾತು ಎಲ್ಲದರಲ್ಲಿಯೂ ಇದು ಸರ್ವಜ್ಞ ವಚನದ ಹಾಗೆಯೇ ಇದೆ.

ತ್ರಿಪದಿಯು ಹಾಡುವೃತ್ತ. ಆದ್ದರಿಂದ ಅದು ಕೇಳುವುದಕ್ಕೂ ಹೇಳುವುದಕ್ಕೂ ಹಿತವಾಗಿರುತ್ತದೆ. ಅದರ ಮೂರು ಸಾಲುಗಳಲ್ಲಿ ನಾಲ್ಕು ಸಲ ಪ್ರಾಸ ಬರುತ್ತದೆ. ಪ್ರಾಸವು ಕನ್ನಡಕ್ಕೆ ಎತ್ತಿದ್ದು. ಅದನ್ನು ಕಂಡರೆ ಸರ್ವಜ್ಞನಿಗೆ ತುಂಬ ಅಭಿಮಾನ—

ಪ್ರಾಸವಿಲ್ಲದ ಪದವ ತಾಸು ಹಾಡಿದರೇನು?
ಸಾಸವೆಯೆಣ್ಣೆ ಹದಮಾಡಿ ಕಣ್ಣಿಗೆ
ಪೂಸಿಕೊಂಡಂತೆ ಸರ್ವಜ್ಞ॥

೨೮. ಕೊನೆಮಾತು

ಸರ್ವಜ್ಞ ವಚನಗಳಲ್ಲಿ ಸುಮಾರು ಎರಡು ಸಾವಿರದವರೆಗೆ ಅಚ್ಚಾಗಿವೆ. ಆದರೆ ಇವೆಲ್ಲವೂ ಒಂದೇ ಸಮನಾಗಿ ರುಚಿಸುವುದಿಲ್ಲ. ಒಬ್ಬ ಮನುಷ್ಯನ ಬೆಲೆ ಕಟ್ಟಬೇಕಾದರೆ ಅವನು ಮಾಡಿರತಕ್ಕ ಉತ್ತಮವಾದ ಕಾರ್ಯಗಳನ್ನೇ ನೋಡಿ ಬೆಲೆ ಕಟ್ಟಬೇಕು. ಹಾಗೆ ಕಾವ್ಯದಲ್ಲಿಯೂ ಉತ್ತಮವಾದ ಭಾಗವನ್ನು ನೋಡಿಯೇ ಅದರ ಬೆಲೆ ಕಟ್ಟಬೇಕು. ಕೊನೆಗೆ ನಿಲ್ಲತಕ್ಕದ್ದು ಅದೇ ಭಾಗವೇ. ಇಂಥ ಭಾಗವನ್ನು ಆರಿಸುತ್ತ ಹೋದರೆ ಸರ್ವಜ್ಞನ ವಚನಗಳಲ್ಲಿ ಹಲವು ರತ್ನಗಳು ಸಿಕ್ಕುತ್ತವೆ. ಅವುಗಳನ್ನು ಒಂದು ಸಾರಿ ಓದಿದರೆ ಎಂದಿಗೂ ಮರೆಯುವುದಕ್ಕಾಗುವುದಿಲ್ಲ. ಇಂಥವುಗಳಲ್ಲಿ ನೂರಕ್ಕೆ ಮೇಲ್ಪಟ್ಟು ವಚನಗಳನ್ನು ಆರಿಸಿ ಹಿಂದೆ ಸಂದರ್ಭೋಚಿತವಾಗಿ ಉದಾಹರಿಸಿದ್ದೇವೆ. ಅವುಗಳನ್ನು ಪಾಠಕರು ಓದಿ ಸಂತೋಷ ಪಟ್ಟಿದ್ದಾರೆಂಬುದು ನಮ್ಮ ನಂಬಿಕೆ.

ಕೆ.ಸಂ. ೨೮೨೮೭—ಎಂ.ಯು.ಪಿ.ಎ—೧೦,೦೦೦—೧೮-೩-೮೭